ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 31 ಶನಿವಾರ 2025

ಸಂಪುಟ: 46 | ಸಂಚಿಕೆ: 45 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆ

ನೂರಡಿ ದಾಟಿದ ಕೆಆರ್‌ಎಸ್ ನೀರಿನ ಮಟ್ಟ



ಶ್ರೀರಂಗಪಟ್ಟಣ, ಮೇ 30– ಕೊಡಗು ಜಿಲ್ಲೆ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ನೂರರ ಗಡಿ ದಾಟಿದೆ.

ಒಳಹರಿವಿನ ಪ್ರಮಾಣ ಹೆಚ್ಚಾಗಿದ್ದು, 124.80 ಗರಿಷ್ಠ ಮಟ್ಟ ಹೊಂದಿರುವ ವಿಶ್ವ ವಿಖ್ಯಾತ ಕೃಷ್ಣರಾಜಸಾಗರ ಅಣೆಕಟ್ಟೆಯ ನೀರಿನ ಮಟ್ಟ ಶುಕ್ರವಾರ 100.10 ಅಡಿಗೆ ತಲುಪಿದ್ದು, ಕಳೆದ ಕೆಲವು ದಿನಗಳಲ್ಲಿ ಒಳಹರಿವಿನ ಪ್ರಮಾಣ ಗಣನೀಯವಾಗಿ ಏರಿಕೆ ಕಂಡ ಹಿನ್ನೆಲೆಯಲ್ಲಿ ನೀರಿನ ಸಂಗ್ರಹದಲ್ಲಿ 11 ಅಡಿ ಏರಿಕೆಯಾಗಿದೆ. ಕಳೆದ ವರ್ಷದ ನೀರಿನ ಸಂಗ್ರಹಕ್ಕೆ ಹೋಲಿಸಿದರೆ ಈ ಭಾರಿ 17 ಅಡಿ ನೀರು ಹೆಚ್ಚು ಸಂಗ್ರಹವಾಗಿದೆ.

ಹಲವು ವರ್ಷಗಳ ನಂತರ ಮೇ ತಿಂಗಳ ಕೊನೆಯಲ್ಲಿಯೇ ಅಣೆಕಟ್ಟೆಯ ನೀರಿನ ಮಟ್ಟ 100 ಅಡಿಗೆ ತಲುಪಿದ್ದು, ಈ ಭಾರಿ ಕೂಡ ಕುಡಿಯುವ ನೀರು ಮತ್ತು ತಮಿಳುನಾಡಿಗೆ ಹರಿಸುವ ನೀರಿನ ಸಂಗ್ರಹದಲ್ಲಿ ಯಾವುದೇ ಕೊರತೆಯಾಗುವುದಿಲ್ಲ.

ಪ್ರಸ್ತುತ ಅಣೆಕಟ್ಟೆಗೆ ಒಳಹರಿವು 19448 ಕ್ಯುಸೆಕ್, ಹೊರಹರಿವು 670 ಕ್ಯುಸೆಕ್ ಇದ್ದು, 22.888 ಟಿ.ಎಂ.ಸಿ ನೀರಿನ ಸಂಗ್ರಹವಿದೆ. ಕಳೆದ ವರ್ಷ ಇದೇ ದಿನ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 83 ಅಡಿ ಇದ್ದು, ಒಳಹರಿವು 1798 ಕ್ಯುಸೆಕ್, ಹೊರಹರಿವು 542 ಕ್ಯುಸೆಕ್ ದಾಖಲಾಗಿತ್ತು.

ಕಳೆದ ವರ್ಷ ಬರಗಾಲದಿಂದ ನೀರಿನ ಕೊರತೆಯಿಂದ ಬೆಳೆ ನಷ್ಟದಿಂದ ಕಂಗೆಟ್ಟಿದ ರೈತರು ದಿನದಿಂದ ದಿನಕ್ಕೆ ನೀರಿನ ಮಟ್ಟ ಏರಿಕೆಯಾಗುತ್ತಿರುವ ಕಾರಣ ಸಂತಸಗೊಂಡಿದ್ದಾರೆ. ಮುಂಗಾರು ಬೆಳೆ ಬೆಳೆಯಲು ರೈತರು ಉತ್ಸುಕರಾಗಿದ್ದು. ಮಳೆಯಿಂದ ಕೂಡ ರೈತರಿಗೆ ಅನುಕೂಲವಾಗಿದೆ.

ತಮಿಳುನಾಡಿಗೆ ಜೂನ್ ತಿಂಗಳಲ್ಲಿ 9.19 ಟಿ.ಎಂ.ಸಿ ಹಾಗೂ ಜುಲೈ ತಿಂಗಳಲ್ಲಿ 31.24 ಟಿ.ಎಂ.ಸಿ ನೀರು ಬಿಡಬೇಕಾಗಿದ್ದು, ನದಿಪಾತ್ರದಲ್ಲೂ ಉತ್ತಮ ಮಳೆಯಾಗುತ್ತಿದೆ. ಇದರಿಂದ ತ.ನಾಡಿಗೆ ನೀರು ಹರಿವಿಗೆ ಯಾವುದೇ ತೊಂದರೆಯಾಗುವ ಲಕ್ಷಣಗಳಿಲ್ಲ. ಈ ತಿಂಗಳ ಮಳೆಯ ಪ್ರಮಾಣದಂತೆ ತಮಿಳುನಾಡಿಗೆ ನೀರು ಹರಿಸಬೇಕಾಗುತ್ತದೆ.



ಕಬಿನಿಯಿಂದ 5 ಸಾವಿರ ಕ್ಯುಸೆಕ್ ನೀರು ಬಿಡುಗಡೆ

ಮೈಸೂರು,ಮೇ 30(ಎಂಟಿವೈ)– ಕೇರಳದ ವೈಯನಾಡು ಭಾಗ ಹಾಗೂ ಕಬಿನಿ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂ ದಾಗಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಜಲಾಶಯದಿಂದ ಕಪಿಲೆಗೆ 5 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗುತ್ತಿದ್ದು, ನದಿ ಪಾತ್ರದ ಜನರಿಗೆ ಎಚ್ಚರಿಕೆ ನೀಡಲಾಗಿದೆ.

ಶುಕ್ರವಾರ(ಮೇ 30) ಸಂಜೆ 6 ಗಂಟೆ ವೇಳೆಗೆ ಜಲಾಶಯಕ್ಕೆ ಒಳಹರಿವಿನ ಪ್ರಮಾಣ 18,000 ಕ್ಯುಸೆಕ್ ಇದ್ದು, ಜಲಾನಯನ ಪ್ರದೇಶಗಳಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿರುವುದರಿಂದ ಒಳ ಹರಿವಿನ ಪ್ರಮಾಣ ಇನ್ನಷ್ಟು ಹೆಚ್ಚಾಗುವ ಸಂಭವವಿದೆ. 2284 ಅಡಿ ಗರಿಷ್ಠ ಎತ್ತರದ ಕಬಿನಿ ಜಲಾಶಯದಲ್ಲಿ ಪ್ರಸ್ತುತ 2278.84 ಅಡಿ ನೀರಿದ್ದು, ಜಲಾಶಯ ಭರ್ತಿಯಾಗಲು ಕೇವಲ 5 ಅಡಿ ಮಾತ್ರ ಬಾಕಿ ಇದೆ.

ಇನ್ನು ಒಂದು ವಾರ ಕೇರಳ ಭಾಗ ದಲ್ಲಿ ಹೆಚ್ಚಿನ ಪ್ರಮಾಣದ ಮಳೆ ಸುರಿಯುವ ಮುನ್ಸೂಚನೆ ಇರುವುದರಿಂದ ಹಾಗೂ ಅಲ್ಲಿನ ಕೆಲ ಜಲಾಶಯಗಳಿಂದ ನೀರು ನದಿಗೆ ಬಿಡುವ ಸಾಧ್ಯತೆ ಇರುವುದರಿಂದ ಕಬಿನಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಹರಿದು ಬರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಜಲಾಶಯದ ಭದ್ರತೆಗಾಗಿ ಶುಕ್ರವಾರ ಸಂಜೆಯಿಂದಲೇ ಜಲಾಶಯದಿಂದ ಕಪಿಲ ನದಿಗೆ 8 ಸಾವಿರ ಕ್ಯುಸೆಕ್ ನೀರು ಬಿಡಲಾಗುತ್ತಿದ್ದು, ಒಳ ಹರಿವಿನ ಪ್ರಮಾಣಕ್ಕೆ ಅನುಗುಣವಾಗಿ ಹೆಚ್ಚುವ ಸಾಧ್ಯತೆ ಇದೆ ಇದರಿಂದ ನದಿ ಪಾತ್ರದ ಜನರು ತಮ್ಮ ಆಸ್ತಿ–ಪಾಸ್ತಿ, ಜಾನುವಾರುಗಳೊಂದಿಗೆ ಸುರಕ್ಷಿತ ಸ್ಥಳಗಳಿಗೆ ತೆರಳಿ ಎಚ್ಚರಿಕೆಯಿಂದ ಇರುವಂತೆ ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರ ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರಿಗೆ 5 ಲಕ್ಷ ಇಡುಗಂಟು ಸೌಲಭ್ಯ: ಸರ್ಕಾರದಿಂದ ಆದೇಶ

ಬೆಂಗಳೂರು, ಮೇ 30– ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ 60 ವರ್ಷ ಪೂರೈಸಿದ ಮತ್ತು ಮರಣ ಹೊಂದಿದ ಅತಿಥಿ ಉಪನ್ಯಾಸಕರಿಗೆ 5 ಲಕ್ಷ ಇಡುಗಂಟು ಸೌಲಭ್ಯ ನೀಡುವುದಾಗಿ ಸರ್ಕಾರ ಆದೇಶಿಸಿದೆ.

ಇಡುಗಂಟು ಯೋಜನೆಯು 2024ರ ಜನವರಿ 1 ರಿಂದಲೇ ಜಾರಿಗೆ ಬರಲಿದ್ದು, ಕನಿಷ್ಠ 1 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಥವಾ ಮರಣ ಹೊಂದಿರುವ ಎಲ್ಲಾ ಅತಿಥಿ ಉಪನ್ಯಾಸಕರಿಗೂ ಯೋಜನೆ ಅನ್ವಯವಾಗಲಿದೆ. ಯೋಜನೆ ಅನುಷ್ಠಾನಕ್ಕೆ ಬಂದ ಹಿಂದಿನ 5 ವರ್ಷಗಳಲ್ಲಿ ಕನಿಷ್ಠ 1 ವರ್ಷ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, 60 ವರ್ಷ ಪೂರ್ಣಗೊಳಿಸಿರುವ ಅತಿಥಿ ಉಪನ್ಯಾಸಕರೂ ಈ ಯೋಜನೆಗೆ ಒಳಪಡಲಿದ್ದಾರೆ. ಈ ಯೋಜನೆಗೆ ಒಟ್ಟಾರೆ 44.15 ಕೋಟಿ ರೂ. ಹಣವನ್ನು ಸರ್ಕಾರ ಕಾಯ್ದಿರಿಸಿ ಆದೇಶ ಹೊರಡಿಸಿದೆ.

ಇದೀಗ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಅತಿಥಿ ಉಪನ್ಯಾಸಕರಿಗೆ ಇಡುಗಂಟು ಸೌಲಭ್ಯ ಅನುಷ್ಠಾನಕ್ಕೆ ಉನ್ನತ ಶಿಕ್ಷಣ ಇಲಾಖೆಯು ಮಾರ್ಗಸೂಚಿ ಪ್ರಕಟಿಸಿದೆ.

ಅತಿಥಿ ಶಿಕ್ಷಕರು, ಉಪನ್ಯಾಸಕರಿಗೂ ಇಡುಗಂಟು ಸೌಲಭ್ಯ ವಿಸ್ತರಿಸಿ

ಎಂಎಲ್‌ಸಿ ವಿವೇಕಾನಂದ ಮನವಿ




ಮೈಸೂರು, ಮೇ 30(ಆರ್‌ಕೆ)–ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ಸ್ತರದ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರಿಗೂ ಇಡುಗಂಟು ಸೌಲಭ್ಯವನ್ನು ವಿಸ್ತರಿಸುವಂತೆ ವಿಧಾನ ಪರಿಷತ್ ಸದಸ್ಯ ವಿವೇಕಾನಂದ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

2024ರ ಜನವರಿ 1ರಿಂದ ಜರಿಗೆ ಬರುವಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ, ಮರಣ ಹೊಂದಿದವರಿಗೆ 5 ಲಕ್ಷ ರೂ. ಇಡುಗಂಟು ನೀಡಲು ಸರ್ಕಾರ ಆದೇಶ ನೀಡಿದ್ದು, ಈ ಸೌಲಭ್ಯವನ್ನು ಇತರ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರು, ಶಿಕ್ಷಕರಿಗೂ ವಿಸ್ತರಿಸುವಂತೆ ಅವರು ಕೋರಿದ್ದಾರೆ.

ಚಪ್ಪಲಿ ಒಳಗಿದ್ದ ಮಂಡಲದ ಹಾವು!

- ಈ ವೇಳೆ ಬೆಚ್ಚನೆ ಸ್ಥಳವೆಂದು ಚಪ್ಪಲಿ, ಶೂ ಸೇರುತ್ತವೆ ಹಾವುಗಳು
- ಯಾವುದೇ ಹಾವು ಕಚ್ಚಿದರೆ ಮೌಢ್ಯತೆ ಬಿಟ್ಟು ಆಸ್ಪತ್ರೆಗೆ ಹೋಗಿ



ಮೈಸೂರು, ಮೇ30 (ಬಿಎಲ್‌ಯು)– ಚಪ್ಪಲಿಯೊಳಗೆ ಸೇರಿದ್ದ ಹಾವು ನೋಡಿ ಎಚ್ಚೆತ್ತುಕೊಂಡ ವ್ಯಕ್ತಿಯೊಬ್ಬರು ಅಪಾಯದಿಂದ ಪಾರಾ ಗಿರುವ ಘಟನೆ ಮೈಸೂರಿನಲ್ಲಿ ಇಂದು ಸಂಭವಿಸಿದೆ.

ಮೈಸೂರಿನ ದಟ್ಟಗಳ್ಳಿ ಬಳಿಯ ಕಾರ್ತಿಕ್ ಬಡಾವಣೆಯ ಮನೆ ಯೊಂದರ ಹೊರಗೆ ಬಿಟ್ಟಿದ್ದ ಚಪ್ಪಲಿಯೊಳಗೆ ಹಾವು ಸೇರಿಕೊಂಡಿತ್ತು. ಚಪ್ಪಲಿ ಹಾಕಿಕೊಳ್ಳುವ ಮುನ್ನ ಒಳಗೆ ಹಾವು ಇರುವುದನ್ನು ಗಮನಿಸಿದ ಆ ವ್ಯಕ್ತಿ ಹೌಹಾರಿದ್ದಾರೆ.

ತಕ್ಷಣವೇ ಉರಗ ತಜ್ಞ ಸ್ನೇಕ್ ಶ್ಯಾಮ್ ಅವರಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಬಂದ ಸ್ನೇಕ್ ಶ್ಯಾಮ್ ಅವರು ಚಪ್ಪಲಿಯಲ್ಲಿರುವ ಹಾವು ಯಾವುದಿರಬಹುದು ಎಂದು ನೋಡಿದಾಗ ಅದು ಮಂಡಲದ ಹಾವು ಎಂಬುದು ಖಾತ್ರಿಯಾಗಿದೆ.

ನಂತರ ಆ ಹಾವನ್ನು ಹಿಡಿದು ಬಾಟಲ್‌ನಲ್ಲಿ ಹಾಕಿಕೊಳ್ಳುತ್ತಿದ್ದಂತೆ ಮನೆಯವರು ನಿಟ್ಟುಸಿರು ಬಿಟ್ಟಿದ್ದಾರೆ. ಮಂಡಲದ ಹಾವು ಕಚ್ಚಿದಾಗ ತಕ್ಷಣವೇ ಆಸ್ಪತ್ರೆಗೆ ಹೋಗಬೇಕು. ಈ ವೇಳೆ ಮಂತ್ರ, ಯಂತ್ರಗಳಿಂದ ವಿಷ ಹೋಗುತ್ತದೆ ಎಂಬ ಮೂಢ ನಂಬಿಕೆಗೆ ಒಳಗಾಗಬಾರದು. ಒಂದು ವೇಳೆ ಮಂಡಲದ ಹಾವು ಕಚ್ಚಿದಾಗ ಆಸ್ಪತ್ರೆಗೆ ತೋರಿಸಿ ಇಂಜೆಕ್ಷನ್ ಪಡೆಯದಿದ್ದರೆ ಹಾವು ಕಚ್ಚಿದ ಜಾಗ ಕೊಳೆಯುತ್ತದೆ. ಕಿಡ್ನಿ ವೈಫಲ್ಯ ಸೇರಿದಂತೆ ಹಲವು ರೀತಿಯ ಅನಾರೋಗ್ಯ ಸಮಸ್ಯೆ ಎದುರಿಸಬೇಕಾಗುತ್ತದೆ. ಪ್ರಾಣಕ್ಕೆ ಕುತ್ತು ಉಂಟಾಗುತ್ತದೆ.

ಈ ಹಿನ್ನೆಲೆಯಲ್ಲಿ ಹಾವು ಕಚ್ಚಿರುವುದನ್ನು ನಿರ್ಲಕ್ಷಿಸದೆ ಕೂಡಲೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕು ಎಂದು ಸ್ನೇಕ್ ಶ್ಯಾಮ್ ಸಲಹೆ ನೀಡಿದರು.

ಮನೆಯ ಹೊರಗೆ ಚಪ್ಪಲಿ, ಶೂ ಬಿಡುವಾಗ ಹುಷಾರ್

ಬೇಸಿಗೆ ಕಾಲದಲ್ಲಿ ತಂಪಾದ ಸ್ಥಳ ಹಾಗೂ ಮಳೆ, ಚಳಿಗಾಲದಲ್ಲಿ ಬೆಚ್ಚನೆ ಸ್ಥಳದಲ್ಲಿರುವುದು ಹಾವುಗಳ ಜೀವನ ಶೈಲಿ. ಈಗ ಮಳೆಗಾಲವಾಗಿರುವ ಹಿನ್ನೆಲೆಯಲ್ಲಿ ಚಳಿಯ ಕಾರಣ ಮಂಡಲದ ಹಾವು ಚಪ್ಪಲಿಯೊಳಗಿನ ಬೆಚ್ಚನೆ ಸ್ಥಳ ಸೇರಿದೆ. ಹಾಗಾಗಿ ಯಾರೂ ಕೂಡ ಮನೆಯ ಹೊರಗೆ ಚಪ್ಪಲಿ, ಶೂಗಳನ್ನು ಬಿಡಬಾರದು. ಒಂದು ವೇಳೆ ಹೊರಗೆ ಬಿಟ್ಟರೂ, ಒಳಗೆ ಏನು ಇಲ್ಲ ಎಂದು ಖಾತ್ರಿ ಮಾಡಿಕೊಂಡು ಚಪ್ಪಲಿ ಮತ್ತು ಶೂ ಧರಿಸಬೇಕು.

ಇತ್ತೀಚಿಗೆ ವಿವಿಧ ರೀತಿಯ ಹಾವುಗಳ ಕಡಿತಕ್ಕೊಳಗಾದವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಾವು ಕಡಿತಕ್ಕೊಳಗಾದವರಿಗೆ ತುರ್ತು ಚಿಕಿತ್ಸೆ ನೀಡಲು ನಗರದ ಕೆ.ಆರ್.ಆಸ್ಪತ್ರೆಯಲ್ಲಿ ಪ್ರತ್ಯೇಕ ವಾರ್ಡ್ ತೆರೆಯಬೇಕು. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಹಳಷ್ಟು ಬಾರಿ ಮನವಿ ಮಾಡಿದರೂ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ.

- ಸ್ನೇಕ್ ಶ್ಯಾಮ್, ಉರಗ ತಜ್ಞ

ಉಚಿತ ಒಕ್ಕಲಿಗ ವಧು–ವರರ ಸಮಾವೇಶ

ಮೈಸೂರು, ಮೇ 30– ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಮೈಸೂರು ತನ್ನ ಜಿಲ್ಲಾ, ತಾಲೂಕು ಶಾಖೆಗಳು ಹಾಗೂ ಇತರೆ ಸಹಮನಸ್ಕ ಸಂಸ್ಥೆಗಳ ಸಹಯೋಗದೊಂದಿಗೆ ಜೂ.1ರಂದು ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಜಯನಗರ, ಮೈಸೂರು ಇಲ್ಲಿ ಬೆಳಗ್ಗೆ 9 ಗಂಟೆಗೆ ಉಚಿತ ಒಕ್ಕಲಿಗ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ.

ಆಸಕ್ತ ವಧು–ವರರು ತಮ್ಮ ಇತ್ತೀಚಿನ ಪೋಸ್ಟ್ ಕಾರ್ಡ್ ಅಳತೆಯ ಭಾವಚಿತ್ರ ಮತ್ತು ಆಧಾರ್ ಕಾರ್ಡ್ ಅನ್ನು ತಂದು ನೊಂದಾಯಿಸಿಕೊಂಡು ಸಮಾವೇಶದಲ್ಲಿ ಭಾಗವಹಿಸಬಹುದು. ಕಾರ್ಯಕ್ರಮದ ನಂತರ ಈಗಾಗಲೇ ನಮ್ಮಲ್ಲಿ ನೊಂದಾಯಿಸಿಕೊಂಡಿರುವ ಸುಮಾರು 2000 ಕ್ಕೂ ಹೆಚ್ಚು ಫೈಲ್‌ಗಳನ್ನು ನೋಡಲು ಅವಕಾಶವನ್ನು ನೊಂದಾಯಿಸಿಕೊಂಡಿರುವವರಿಗೆ ಮಾತ್ರ ನೀಡಲಾಗುವುದು. ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9483453005, 9900629393 ಗೆ ಸಂಪರ್ಕಿಸುವುದು.

ಇಂದು ಪಿಜಿಸಿಇಟಿ, ಡಿಸಿಇಟಿ

ಬೆಂಗಳೂರು, ಮೇ 30– ಎಂ.ಟೆಕ್, ಡಿಸಿಇಟಿ ಪ್ರವೇಶ ಮತ್ತು ಐಎಎಸ್, ಕೆಎಎಸ್ ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಶನಿವಾರ (ಮೇ 31) ರಾಜ್ಯದ 113 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ.

ಈ ಪರೀಕ್ಷೆಗಳಿಗೂ ಅಭ್ಯರ್ಥಿಗಳನ್ನು ತೀವ್ರ ತಪಾಸಣೆ ಮಾಡುವುದರ ಜೊತೆಗೆ ಮುಖ ಚಹರೆ ಪತ್ತೆ ತಂತ್ರಜ್ಞಾನದ ಮೂಲಕವೇ ಅಭ್ಯರ್ಥಿಗಳ ಗುರುತು ಪತ್ತೆ ಹಚ್ಚಲಾಗುತ್ತದೆ. ನಕಲಿ ಅಭ್ಯರ್ಥಿಗಳ ಪ್ರವೇಶಕ್ಕೆ ಅವಕಾಶವೇ ಇರುವುದಿಲ್ಲ. 52,352 ಮಂದಿ ಈ ಪರೀಕ್ಷೆಗಳನ್ನು ಬರೆಯಲಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಡಿಪ್ಲೊಮಾ ಮುಗಿಸಿ ಎಂಜಿನಿಯರಿಂಗ್ ಪದವಿಯ 3ನೇ ಸೆಮಿಸ್ಟರ್ ಅಥವಾ ಎರಡನೇ ವರ್ಷಕ್ಕೆ ನೇರ ಪ್ರವೇಶ ಕಲ್ಪಿಸುವುದಕ್ಕೆ ರಾಜ್ಯದ 46 ಕೇಂದ್ರಗಳಲ್ಲಿ ಡಿಸಿಇಟಿ ನಡೆಸುತ್ತಿದ್ದು, 21,201 ಮಂದಿ ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ. ಎಂ.ಟೆಕ್‌ನ ಮೆಕಾನಿಕಲ್, ಸಿವಿಲ್ ಮತ್ತು ಎಲೆಕ್ಟ್ರಿಕಲ್ ಸೈನ್ಸ್ ಕೋರ್ಸ್‌ಗಳ ಪ್ರವೇಶಕ್ಕೆ 13 ಕೇಂದ್ರಗಳಲ್ಲಿ ಪಿಜಿಸಿಇಟಿ ನಡೆಯುತ್ತಿದ್ದು, 3,756 ಮಂದಿ ಪರೀಕ್ಷೆ ಬರೆಯುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯು ಕೆಎಎಸ್ ಪರೀಕ್ಷೆಯ ತರಬೇತಿಗೆ ನಡೆಸುವ ಪರೀಕ್ಷೆಯನ್ನು 19,992 ಮಂದಿ ಬರೆಯಲಿದ್ದು, 14 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳ ಸಲುವಾಗಿ ಐಎಎಸ್ ಮತ್ತು ಕೆಎಎಸ್ ತರಬೇತಿಗಾಗಿ ಪರೀಕ್ಷೆ ನಡೆಯಲಿದ್ದು, ಅದನ್ನು 7,403 ಮಂದಿ ಬರೆಯಲಿದ್ದಾರೆ ಎಂದು ತಿಳಿಸಿದ್ದಾರೆ.

ವಿಕಲಚೇತನ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಯುಜಿಸಿಇಟಿ ಬರೆದ ವಿಕಲಚೇತನ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಜೂನ್ 3ರಿಂದ 6ರವರೆಗೆ ನಡೆಯಲಿದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳು ಮುಂಗಡವಾಗಿ ದಿನಾಂಕವನ್ನು ಕಾಯ್ದಿರಿಸಿಕೊಳ್ಳಲು ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.


ಪಿಜಿಸಿಇಟಿ–25 (ಎಂಇ, ಎಂಟೆಕ್) ಆಯ್ಕೆ ಮಾಡಿರುವ ವಿಕಲಚೇತನ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಜೂನ್ 9ರಂದು ಕೆಇಎ ಕಚೇರಿಯಲ್ಲಿ ನಡೆಯಲಿದೆ. ಎಂಬಿಎ, ಎಂಸಿಎ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ದಿನಾಂಕವನ್ನು, ನಂತರ ತಿಳಿಸಲಾಗುವುದು ಎಂದು ತಿಳಿಸಿದ್ದಾರೆ.

ಪೈಲ್ವಾನ್ ಪುಟ್ಟಸ್ವಾಮಿ ನಿಧನ




ಮೈಸೂರು, ಮೇ30(ಜಿಎ)–ಮೈಸೂರಿನ ಅಶೋಕಪುರಂನ ನಿವಾಸಿ ಹಾಗೂ ಬ್ರಿಟಿಷ್ ಕಾಲದ ಉಸ್ತಾದ್ ಪೈಲ್ವಾನ್ ಪುಟ್ಟಸ್ವಾಮಿ (92) ಶುಕ್ರವಾರ ನಿಧನರಾದರು. ಮೃತರು ಐವರು ಪುತ್ರರು, ಏಳು ಮಂದಿ ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅಶೋಕಪುರಂನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಆರ್.ಮಧುಸೂದನ್



ಮೈಸೂರು, ಮೇ 30– ಮೈಸೂರು ಖಿಲ್ಲೆಮೊಹಲ್ಲಾ ನಿವಾಸಿ, ಖಾಸಗಿವಾಹಿನಿ ಹಿರಿಯ ವೀಡಿಯೋಗ್ರಾಫರ್ ಆರ್.ಮಧುಸೂದನ್(48) ಶುಕ್ರವಾರ ನಿಧನರಾದರು. ಮೃತರು ಪತ್ನಿ ಆಶಾ, ಓರ್ವ ಪುತ್ರ, ಪುತ್ರಿ ಹಾಗೂ ತಾಯಿ ನಾಗಮಣಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.05.2025 ಶನಿವಾರ, ಮಳೆ ನಕ್ಷತ್ರ: ರೋಹಿಣಿ 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣೆ, ಮೂತ್ರ ಪಿಂಡ (ಕಿಡ್ನಿ) ಕಾಯಿಲೆಗೆ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದಿಕ್ ಟೀಚಿಂಗ್ ಹಾಸ್ಪಿಟಲ್, ಡಾ. ಚಂದ್ರಶೇಖರ್ ಫೌಂಡೇಷನ್ ಟ್ರಸ್ಟ್ :** ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 9.30 ರಿಂದ.
- **ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನ – ಶ್ರೀ ಕ್ಷೇತ್ರ, ಮೈಸೂರು :** 20ನೇ ವಾರ್ಷಿಕ ಪ್ರತಿಷ್ಠಾ ವರ್ಧಂತ್ಯುತ್ಸವ–2025, ವಿಶೇಷ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸೇವಾ ಕಾರ್ಯಕ್ರಮ, ಅಕ್ಷರಾಭ್ಯಾಸ, ಬಡ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ನೋಟ್ ಪುಸ್ತಕ ಹಾಗೂ ಬರವಣಿಗೆ ಸಾಮಗ್ರಿಗಳ ವಿತರಣೆ, ಸ್ಥಳ: ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನ, ವಿಜಯನಗರ 3ನೇ ಹಂತ, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಭುಜ ನೋವು, ದುಷ್ಟವ್ರಣ/ಮಾಯದ ಗಾಯ, ಮಾನಸಿಕ ಒತ್ತಡ ನಿವಾರಣೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ಸುಯೋಗ್ ಆಸ್ಪತ್ರೆ :** ಉಚಿತ ಕೀಲು, ಮೂಳೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ :** ಓಪನ್ ಡೇ ಮತ್ತು ಜೇಸಿಯಾನ–2025, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಉಪಸ್ಥಿತರು : ಜೆಎಸ್‌ಎಸ್ ವಿವಿ ಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಸ್ಥಳ : ಎಸ್‌ಜೆಸಿಇ ಕಾಲೇಜು ಆವರಣ, ಬೆಳಗ್ಗೆ 10 ರಿಂದ.
- **ವಿದ್ಯಾವರ್ಧಕ ಕಾನೂನು ಕಾಲೇಜು :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಹಿರಿಯ ಸಿವಿಲ್ ನ್ಯಾಯಾಧೀಶ ಜಿ.ಹೆಚ್. ಹೇಮಂತ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಕಾಲೇಜು ಅಧ್ಯಕ್ಷ ಎಸ್. ಶಿವಲಿಂಗಯ್ಯ, ಹೆಚ್.ಎಸ್. ಶಿವಕುಮಾರ, ಪ್ರಿನ್ಸಿಪಾಲ್ ಡಾ. ಪಿ. ದೀಪು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಅವಧೂತ ದತ್ತ ಪೀಠ :** ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ, ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನಾಚರಣೆ, ಬೆಳಗ್ಗೆ 7ಕ್ಕೆ ಶ್ರೀ ದತ್ತ ಹ್ಯೂಮನ್ ಸರ್ವಿಸಸ್ ಸ್ವಯಂಸೇವಕರ ಮೆರವಣಿಗೆ, 8ಕ್ಕೆ ಶ್ರೀ ಚಕ್ರಪೂಜೆ, 9 ಗಂಟೆಗೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಶಾಂತಿ ಕಲ್ಯಾಣ ಮಹೋತ್ಸವ, ಬೆಳಗ್ಗೆ 10 ಗಂಟೆಗೆ ಚಾರ್ಟಿಗಳ ವಿತರಣೆ, ಸಂಜೆ 5ಕ್ಕೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ರುದ್ರಾಕ್ಷ ರಥ ಉತ್ಸವ, ಸಂಜೆ 7ಕ್ಕೆ ವಿಶೇಷ ಹಾರ್ಮೋನಿಯಂ– ವಿದ್ವಾನ್ ರವೀಂದ್ರ ಗುರುರಾಜ್ ಕಟೋಟಿ. ಸ್ಥಳ: ಅವಧೂತ ದತ್ತಪೀಠ, ನಂಜನಗೂಡು ರಸ್ತೆ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಶ್ರೀ ಮಲೈ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ಲಿಂಗೈಕ್ಯ ಪಟ್ಟದ ಪೂಜ್ಯ ಶ್ರೀ ಗುರುಸ್ವಾಮಿಗಳವರಿಗೆ ನುಡಿನಮನ, ಸಾನ್ನಿಧ್ಯ : ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ, ಪ್ರಧಾನ ನುಡಿ : ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಮಾಲಂಗಿ ಸುರೇಶ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವ ಅಧ್ಯಕ್ಷ ಅಂಬಳೆ ಶಿವಣ್ಣ, ಉಪಸ್ಥಿತರು : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಗೋಲ್ಡನ್ ಟಿ. ಸುರೇಶ್, ನಜರ್‌ಬಾದ್ ನಟರಾಜು, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 12.30ಕ್ಕೆ
- **ರಂಗವಲ್ಲಿ :** ಬಹುಭಾಷಾ ಚಲನಚಿತ್ರ ಕಲಾವಿದರಾದ ಕಿಶೋರ್ ಕುಮಾರ್–ಸಿರಿ ರವಿಕುಮಾರ್ ಅಭಿನಯದ 'ಲವ್ ಲೆಟರ್ಸ್–ನಿನ್ನ ಪ್ರೀತಿಯ ನಾನು' ನಾಟಕ ಪ್ರದರ್ಶನ, ನಿರ್ದೇಶನ : ವೆಂಕಟೇಶ್ ಪ್ರಸಾದ್, ಸ್ಥಳ: ಕಿರು ರಂಗಮಂದಿರ, ರಂಗಾಯಣ ಆವರಣ, ಸಂಜೆ 4 ಮತ್ತು 7
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 882, ಕಥೆ ಹೇಳುವವರು: ಶ್ರೀಮತಿ ಸುಮ ವಿ.ಎನ್, ಶಿಕ್ಷಕಿ, ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ನಂಜನಗೂಡು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಮೈಸೂರು, ಸಂಜೆ 4.30 ರಿಂದ.
- **ಡಾ. ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ :** ಡಾ. ರಾಜ್‌ಕುಮಾರ್‌ರವರ 97ನೇ ಜಯಂತಿ ಹಾಗೂ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರ 8ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪೋಸ್ಟ್ ವುಮೆನ್ ಕು.ವೀಣಾ ಅವರಿಗೆ ಡಾ. ರಾಜ್ ಕಲಾಸೇವಾ ರತ್ನ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು : ಶ್ರೀಮತಿ ಪೂರ್ಣಿಮಾ ರಾಂಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಡಾ. ಪವನ್ ವಿ. ಜೋಶಿ, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ. ಭೈರಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕಂದಾಯ ನಿರೀಕ್ಷಕ ಮಂಜುನಾಥ್, ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಎನ್.ಎಸ್. ರಾಘವೇಂದ್ರ, ಶ್ರೀಮತಿ ಸುವರ್ಣಮ್ಮ, ಸ್ಥಳ: ಕಲಾಮಂದಿರ, ಸಂಜೆ 5 ರಿಂದ.
- **ವ್ಯವಸ್ಥಾಪಕರು :** ಪ್ರತಿಭಾ ಪುರಸ್ಕಾರ ಸಮಾರಂಭ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ರಘು ಆರ್. ಕೌಟಿಲ್ಯ, ಮಾಜಿ ಶಾಸಕ ಎಲ್. ನಾಗೇಂದ್ರ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ. ರಾಜೇಂದ್ರ, ವಿದ್ಯಾವಿಕಾಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ, ಸ್ಥಳ: ನಿವೇದಿತಾನಗರ ಎಸ್.ಆರ್. ಸುಬ್ಬರಾವ್ ಉದ್ಯಾನವನ, ಸಂಜೆ 5ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ, ರೋಟರಿ ಮೈಸೂರು ಸ್ಟಾರ್ಸ್ :** ಹಿರಿಯ ಕವಯಿತ್ರಿ ನಾಗಮ್ಮ ಅವರ ಅಂತರಂಗ ಕವನ ಸಂಕಲನ ಲೋಕಾರ್ಪಣೆ ಸಮಾರಂಭ, ಪ್ರಾಸ್ತಾವಿಕ ಭಾಷಣ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಬಿಡುಗಡೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಕೃತಿ ಕುರಿತು : ಹಿರಿಯ ಸಂಸ್ಕೃತ ವಿದುಷಿ ಡಾ. ಕೆ. ಲೀಲಾಪ್ರಕಾಶ್, ಮುಖ್ಯ ಅತಿಥಿಗಳು : ಪ್ರಸಾರಾಂಗ ನಿವೃತ್ತ ಅಧಿಕಾರಿ ಕೆ.ಟಿ. ವೀರಪ್ಪ ಓಬಯ್ಯ, ಎಂ.ವಿ. ಪ್ರಭುಸ್ವಾಮಿ, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.
- **ಕಲಾ ಸಂವಹನ ಟ್ರಸ್ಟ್ :** ಸಿತಾರ್ ಮಾಧುರ್ಯ–ಸಮೂಹ ಸಿತಾರ್ ವಾದನ, ರಾಗ್ ಚಿಕಿತ್ಸಾ–ಪುಸ್ತಕ ಲೋಕಾರ್ಪಣೆ, ಸಿತಾರ್ ತರಗತಿಗಳ ಪ್ರಾರಂಭೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಖ್ಯಾತ ಗಾಯಕಿ ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ, ಅಬಕಾರಿ ಇಲಾಖೆ ಜಂಟಿ ಆಯುಕ್ತ ಬಸವರಾಜ್ ಹಡಪದ್, ಬಿಬಿಎಂಪಿ ವಿಭಾಗೀಯ ಆಯುಕ್ತ ಡಾ.ಬಿ.ಸಿ. ಸತೀಶ್, ಅಧ್ಯಕ್ಷತೆ : ಕಲಾಸಂವಹನ ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ವಸ್ತ್ರದ್, ಉಪಸ್ಥಿತರು : ಸಿತಾರ್ ವಾದಕ ಉಸ್ತಾದ್ ಡಾ. ಮೊಹಾಸಿನ್ ಖಾನ್, ಸಭಾ ಕಾರ್ಯಕ್ರಮದ ನಂತರ ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ ಅವರಿಂದ ಗಾಯನ, ಶ್ರೀಧರ್ ಮಾಂಡ್ರೆ–ತಬಲಾ, ಸತೀಶ್ ಕೊಳ್ಳಿ–ಹಾರ್ಮೋನಿಯಂ, ಉಸ್ತಾದ್ ಡಾ. ಮೊಹಾಸಿನ್ ಖಾನ್ ಮತ್ತು ಶಿಷ್ಯ ವೃಂದದವರಿಂದ ಸಮೂಹ ಸಿತಾರ್ ವಾದನ, ಸ್ಥಳ: ರಮಾ ಗೋವಿಂದ ರಂಗಮಂದಿರ, ನೃಪತುಂಗ ಕನ್ನಡ ಶಾಲೆ, ರಾಮಕೃಷ್ಣನಗರ, ಸಂಜೆ 5.30ಕ್ಕೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಟಿ.ಆರ್. ಮಹಾಲಿಂಗಂ ಸಂಸ್ಮರಣೆ ಅಂಗವಾಗಿ ಡಾ.ಸಿ.ಎ. ಶ್ರೀಧರ್ ಅವರಿಗೆ ವೇಣು ಬ್ರಹ್ಮ ಪದವಿ ಪ್ರದಾನ ಮತ್ತು ಡಾ. ಸಿ.ಎ. ಶ್ರೀಧರ್ ಮತ್ತು ವಿದ್ವಾನ್ ಸಿ.ಎಸ್. ಕೇಶವಚಂದ್ರ ಅವರಿಂದ ಕರ್ನಾಟಕ ಶಾಸ್ತ್ರೀಯ ದ್ವಂದ್ವ ಕೊಳಲುವಾದನ ಕಾರ್ಯಕ್ರಮ, ವಿದ್ವಾನ್ ಅಚ್ಯುತರಾವ್–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ತ್ವಪದಕಾರರ ಅಧ್ಯಯನ ಕೇಂದ್ರ, ರಂಗಾಯಣ :** ಸಂತಕವಿ ಕನಕದಾಸರರು ಯಕ್ಷಗಾನ ಪ್ರಥಮ ಪ್ರಯೋಗ, ನಿರ್ದೇಶನ: ಸುಜಾತ ಡಿ. ಭಟ್ಟ, ಉಪಸ್ಥಿತರು : ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ : ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮನೆ ಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಹೈದರಾಬಾದ್ ಸಹೋದರಿಯರು–ದ್ವಂದ್ವ ಗಾಯನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಎಂ.ಎ. ಶೋಭಾ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು– ಆರ್. ಶಾಂತ ಮತ್ತು ಆರ್.ಶೈಲ, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಗೀತೆಗಳು, 3.30 ಮಕ್ಕಳ ಮಂಟಪ–ಹಕ್ಕಿ ಗೂಡು, ಪ್ರಸ್ತುತಿ: ಎಂ. ಎಸ್. ಭಾರತಿ, 4.00 ನಾಟಕ ಹಾಲಿನವಳ ಲೆಕ್ಕ, ರಚನೆ– ಬಿ.ಎಸ್. ಕೇಶವ ರಾವ್, ನಿರ್ಮಾಣ– ಉಮೇಶ್ ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಖ್ಯಾತ ಇಂಗ್ಲೀಷ್ ಲೇಖಕರಾದ ಹಾಸನದ ಕೆ. ರಾಜಾರಾವ್ ಅವರೊಂದಿಗೆ ಪ್ರೊ. ಸಿ.ಡಿ. ನರಸಿಂಹಯ್ಯ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ : ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಹನೂರು ತಾಲೂಕು ಬಸವನ ಗುಡಿ ಗ್ರಾಮದ ಎಂ.ರಾಜೇಂದ್ರ ಹಾಗೂ ಅವರ ಮಗ ಆರ್. ಅಶ್ವಥ್, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಶಿರಿನ್ ಸೇನ್ ಗುಪ್ತ–ಹಾಡುಗಾರಿಕೆ – ಖಯಾಲ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 31 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 45 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ, ಏನೂ ಕೆಲಸ ಮಾಡದೆ ದುಡಿಮೆ ಮಾಡೋ ಉದ್ಯೋಗ ಯಾವುದಾದರೂ ಇದ್ದರೆ ಹೇಳಪ್ಪ.

ಅಪ್ಪ : ನಂಗೊತ್ತಿಲ್ಲ ಮಗನೇ, ಕೆಲಸವನ್ನೇ ಮಾಡದೆ ಹಣ ಸಿಗೋಕೆ ಹೇಗೆ ಸಾಧ್ಯ?

ಮಗ : ಹಾಗಲ್ಲಪ್ಪ, ನನಗೆ ಕೆಲಸ ಇರಬಾರದು. ಬೇರೆಯವರೆಲ್ಲಾ ಅವರವರ ಕೆಲಸ ಮಾಡಿಕೊಂಡು ಹೋಗ್ತಾ ಇರಬೇಕು. ನಮಗೆ ಹಣ ಬರ್‍ತಾ ಇರಬೇಕು.

ಅಪ್ಪ : ಹಾಗಿದ್ದರೆ ಒಂದು 'ಸುಲಭ ಶೌಚಾಲಯ' ಶುರು ಮಾಡು.

ಮೈಸೂರು ಮಿತ್ರ

ಶನಿವಾರ, 31 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ವಾಸ್ತವದೆದುರು ನಮ್ಮನ್ನು ನಾವು ನಿಲ್ಲಿಸಿ ನೋಡಿದಾಗ ಹೊರಗಿನವರಿಗಿಂತ ನಮ್ಮವರೇ ನಮ್ಮನ್ನು ಹೀಯಾಳಿಸುವುದು ಜಾಸ್ತಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಯಿಯನ್ನು ಹೊಡೆಯಬಾರದು, ಗುಬ್ಬಿಯ ಗೂಡನ್ನು ತೆಗೆಯಬಾರದು.

ನಿಮ್ಮ ಪತ್ರಗಳು

■ ಮೈಸೂರು ಸ್ಯಾಂಡಲ್ ಹೆಸರೇ ಬ್ರ್ಯಾಂಡ್ ಆಗಿರುವಾಗ ರಾಯಭಾರಿಯ ಅಗತ್ಯವಿದೆಯೇ?

ಮಾನ್ಯರೆ,

ತಮನ್ನಾ ಭಾಟಿಯಾ ಅನ್ನುವ ಹೊರ ರಾಜ್ಯದ ನಟಿಗೆ ಬರೋಬ್ಬರಿ 6.20 ಕೋಟಿ ಹಣ ನೀಡಿ ರಾಯಭಾರಿಯಾಗಿ ಮಾಡುವ ಅಗತ್ಯವಿರಲಿಲ್ಲ ಅನಿಸುತ್ತದೆ. ಸಾಧಾರಣ ಸೋಪಿಗೆ ನಟಿಯರ ಅಗತ್ಯ ಕಂಪನಿಗೆ ಇರುತ್ತದೇನೋ? ಆದರೆ, ಬ್ರ್ಯಾಂಡ್ ಹೆಸರನ್ನು ಹೊಂದಿರುವ ಮೈಸೂರು ಸ್ಯಾಂಡಲ್ ಸೋಪ್‌ಗೆ ಅಗತ್ಯವಿಲ್ಲ. ಮೈಸೂರು ಸ್ಯಾಂಡಲ್ ಸೋಪ್ ಈಗಾಗಲೇ ವಿಶ್ವದಾದ್ಯಂತ ಹೆಸರುವಾಸಿ ಆಗಿರುವಾಗ, ತಮನ್ನಾ ಭಾಟಿಯಾ ನಟಿಗೆ ಆರು ಕೋಟಿ ಕೊಟ್ಟು ಕರೆಸುವ ಅಗತ್ಯ ಇತ್ತೆ!? ಕನ್ನಡದಲ್ಲಿ ನಟಿಯರು ಇರಲಿಲ್ವೆ!? ಉತ್ತರದವರು ನಮ್ಮನ್ನು ಜರಿದರೂ, ದೂರಿದರೂ, ಹೀಯಾಳಿಸಿದರೂ ನಾವು ಶಾಂತವಾಗಿರಬೇಕು ಮತ್ತು ಅವರುಗಳನ್ನು ನಾವು ರತ್ನಗಂಬಳಿ ಹಾಸಿ ಸ್ವಾಗತಿಸಬೇಕು!

ಯಾರದು ತಮನ್ನಾಳನ್ನು ಆಯ್ಕೆ ಮಾಡಲು ಒತ್ತಡ ಹೇರಿದವರು? ಕನ್ನಡದ ನಟಿಮಣಿಗಳು ಬೇಡವಾದರೆ!? ಒಂದೇ ಒಂದು ರೂಪಾಯಿ ಹಣ ಪಡೆಯದೆ ನಮ್ಮ ನಾಡಿನ ಅಸ್ಮಿತೆಯಾದ ನಂದಿನಿ ಹಾಲು ಮತ್ತು ಅದರ ಉತ್ಪನ್ನಗಳಿಗೆ ರಾಯಭಾರಿಯಾಗಿದ್ದು ಕರುನಾಡಿನ ಹೆಮ್ಮೆಯ ನಟರಾದ ಡಾ.ಪುನೀತ್ ರಾಜ್‌ಕುಮಾರ್. ಅದರಂತೆಯೇ ಡಾ.ಶಿವರಾಜ್ ಕುಮಾರ್ ಕೂಡ ಯಾವುದೇ ಸಂಭಾವನೆ ಇಲ್ಲದೆ ರಾಯಭಾರಿಯಾಗಿರುವುದು ಹೆಮ್ಮೆಯ ಸಂಗತಿ ವಿಚಾರ, ಕನ್ನಡದ ನಟ–ನಟಿಯರು ಇವರಿಗೆ ಕಣ್ಣಿಗೆ ಕಾಣದೆ ಇರುವುದು ವಿಪರ್ಯಾಸ.ಹಾಗೆಯೇ ಮೈಸೂರು ಸ್ಯಾಂಡಲ್ ಸೋಪಿಗೆ ಕನ್ನಡದ ಕಲಾವಿದರು ಸಣ್ಣ ಮೊತ್ತಕ್ಕೆ ಅಥವಾ ಉಚಿತವಾಗಿ ರಾಯಭಾರ ಮಾಡಲು ಬರುತ್ತಾರೆ. ನಮ್ಮ ನಾಡಿನ ಅಸ್ಮಿತೆಗೆ ನಮ್ಮಲ್ಲೇ ರಚಿತ, ಖಚಿತ,ಉಚಿತ ಇರುವಾಗ, ಅದಾಗಲೇ ವಾರ್ಷಿಕ ನಾಲ್ಕು ನೂರು ಕೋಟಿಗೂ ಅಧಿಕ ಲಾಭ ತರುವ ಸೋಪಿನ ಪ್ರಚಾರಕ್ಕೆ ತಮನ್ನಾ ಭಾಟಿಯಾ ಅವರನ್ನು ಕರೆಸಿ ಆರು ಕಾಲು ಕೋಟಿ ಕೊಡುವ ಅಗತ್ಯವಿಲ್ಲ.

ಮೈಸೂರು ಸ್ಯಾಂಡಲ್ ಸಾಬೂನು ಮತ್ತು ಇತರೆ ಉತ್ಪನ್ನಗಳು ಕರ್ನಾಟಕದೊಳಗೆ ಚಿರಪರಿಚಿತ. ಅದು ಒಂದು ಶತಮಾನಕ್ಕೂ ಹೆಚ್ಚಾಗಿ ಪ್ರಚಲಿತದಲ್ಲಿರುವ ನಮ್ಮದೇ ರಾಜ್ಯದ ಉತ್ಪನ್ನ ಅನ್ನುವ ಹೆಮ್ಮೆ. ಅಷ್ಟೇ ಅಲ್ಲದೆ ಕರ್ನಾಟಕದ ಹೊರಗೂ ಕೂಡ ಸಾಕಷ್ಟು ಜನಪ್ರಿಯತೆ ಗಳಿಸಿದೆ. ಇದೀಗ Karnataka Soaps and Detergents Limited (KSDL) ಸಂಸ್ಥೆಯು ತಮ್ಮ ಉತ್ಪನ್ನಗಳನ್ನು ಭಾರತದಾದ್ಯಂತ ತಲುಪಿಸುವ, ಆ ಮೂಲಕ ವಹಿವಾಟನ್ನು ಇನ್ನಷ್ಟು ಜಾಸ್ತಿ ಮಾಡಿ ಲಾಭ ಮಾಡುವ ಉದ್ದೇಶದಿಂದಾಗಿ ಸಂಸ್ಥೆಗೆ ರಾಯಭಾರಿಯನ್ನಾಗಿ ತಮನ್ನಾ ಅವರನ್ನು ಆಯ್ದುಕೊಂಡಿರುವುದು ಎಲ್ಲರ ಕೆಂಗಣ್ಣಿಗೆ ಗುರಿಯಾಗಿದೆ.ಮೊದಲೇ ಹೇಳಿದ ಹಾಗೆ ಬ್ರ್ಯಾಂಡ್ ಹೆಸರನ್ನು ಹೊಂದಿರುವ ಮೈಸೂರು ಸ್ಯಾಂಡಲ್ ಸೋಪ್‌ಗೆ 6.20 ಕೋಟಿ ರೂಪಾಯಿ ಕೊಟ್ಟು ಬ್ರ್ಯಾಂಡ್ ಹೆಚ್ಚಿಸುವುದು ಖಂಡಿತವಾಗಿ ಅಗತ್ಯವಿಲ್ಲ ಅನಿಸುತ್ತದೆ. KSDL ಸಂಸ್ಥೆಯು ಕೂಡಲೇ ಈ ನಿರ್ಧಾರವನ್ನು ಕೈ ಬಿಡಬೇಕು. ನಮ್ಮಲ್ಲಿನ ನಟ ನಟಿಯರನ್ನು ಆಯ್ಕೆ ಮಾಡುವುದರ ಮೂಲಕ ಕರುನಾಡಿನ ಅಸ್ಮಿತೆ ಕಾಪಾಡಬೇಕು.

–ಪ್ರಕಾಶ್ ಸಿ ಆಲಗೂಡು.ಟಿ ನರಸೀಪುರ

■ ಸಿಪಿಸಿಯಲ್ಲಿ ಕ್ರಾಂತಿಕಾರಿ ಬದಲಾವಣೆ

ಮಾನ್ಯರೆ,

ನ್ಯಾಯಾಲಯದಲ್ಲಿ ಇರುವ ಸಿವಿಲ್ ಪ್ರಕರಣಗಳು ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಶ್ರೀ ಸಾಮಾನ್ಯರಿಗೆ ತ್ವರಿತ ಗತಿಯಲ್ಲಿ ನ್ಯಾಯ ಒದಗಿಸುವ ಮಹತ್ವದ ತಿದ್ದುಪಡಿ ಕಾಯ್ದೆಗೆ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಅಂಕಿತ ಹಾಕಿದ್ದು, ಒಂದೆರಡು ದಿನಗಳಲ್ಲಿ ಅಧಿಸೂಚನೆ ಪ್ರಕಟವಾಗಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಹೇಳಿರುವುದು ಸ್ವಾಗತಾರ್ಹ. ನಮ್ಮಲ್ಲಿ ಸಿವಿಲ್ ಕೇಸ್‌ಗೆ ನ್ಯಾಯಾಲಯಕ್ಕೆ ಹೋದವನು ಸತ್ತ ಎಂಬ ಮಾತಿದೆ. ಅದನ್ನು ಅಳಿಸಿ ಹಾಕಲು ಹೊಸ ಸಿಪಿಸಿ ಕಾನೂನಿನಲ್ಲಿ, ಆರಂಭದಲ್ಲಿ 2 ತಿಂಗಳ ಕಾಲ ಸಂಧಾನಕ್ಕೆ ಅವಕಾಶ, ಸಂಧಾನ ಯಶಸ್ವಿಯಾಗದೆ ಅನಿವಾರ್ಯವಾಗಿ ಪ್ರಕರಣ ದಾಖಲಾದರೆ ಆ ದಿನವೇ ವಿಚಾರಣೆ, ಸಾಕ್ಷ್ಯಗಳ ಹಾಜರಿ ತೀರ್ಪು ಪ್ರಕಟಿಸುವ ದಿನಾಂಕ ಎಲ್ಲದಕ್ಕೂ ವೇಳಾಪಟ್ಟಿ ನಿಗದಿ, ಪ್ರಕರಣ ಇತ್ಯರ್ಥಕ್ಕೆ ಗರಿಷ್ಠ 24 ತಿಂಗಳ ಅವಧಿ ನಿಗದಿ ಮಾಡಿ ಕಾಯಿದೆ ಜಾರಿಗೆ ತರಲು ಶಾಸಕಾಂಗ ಸಂಪೂರ್ಣ ಸಹಕಾರ ನೀಡಿರುವುದು ಮೆಚ್ಚುವಂತದ್ದು. ನ್ಯಾಯಾಂಗವೂ ಸಹಕಾರ ನೀಡಿ ಕಾಯ್ದೆ ಯಶಸ್ವಿಯಾಗುವಂತೆ ನೋಡಿಕೊಳ್ಳುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ರಾಜೇಂದ್ರ ನಗರದಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಅಂಗಡಿಗಳು

ಮಾನ್ಯರೆ,

ಮೈಸೂರಿನ ರಾಜೇಂದ್ರ ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗದಲ್ಲಿ ಅಂಗಡಿಗಳು ನಾಯಿಕೊಡೆಗಳಂತೆ ತಲೆ ಎತ್ತಿದ್ದು, ಜನರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ.ಬೀದಿ ಬದಿ ವ್ಯಾಪಾರಿಗಳು ಹಾಗೂ ತಳ್ಳು ಗಾಡಿ ವರ್ತಕರು ಪಾದಚಾರಿ ಮಾರ್ಗದಲ್ಲಿ ನಿಯಮಬಾಹಿರವಾಗಿ ವ್ಯಾಪಾರ ಮಾಡುತ್ತಿದ್ದು, ಈ ಅಕ್ರಮಕ್ಕೆ ಕಡಿವಾಣ ಹಾಕಬೇಕಾದ ನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸರು ಮೌನಕ್ಕೆ ಶರಣಾಗಿದ್ದಾರೆ.ರಾಜೇಂದ್ರ ನಗರದ ಮುಖ್ಯ ರಸ್ತೆ, ರಾಜೇಂದ್ರ ನಗರ ಆರ್ಚ್ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗದಲ್ಲಿ ಬೀದಿ ಬದಿ ವ್ಯಾಪಾರಿಗಳದೇ ಕಾರುಬಾರು. ಜನರ ಓಡಾಟಕ್ಕೆ ಮೀಸಲಾದ ಪಾದಚಾರಿ ಮಾರ್ಗವನ್ನು ಬಟ್ಟೆ, ಪಾದರಕ್ಷೆ, ತರಕಾರಿ, ಹಣ್ಣು, ಎಲೆಕ್ಟ್ರಾನಿಕ್ ವಸ್ತುಗಳು, ಹಾಗೂ ಹೂವಿನ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದಾರೆ. ಇವರಿಗೆ ಪರ್ಯಾಯವಾಗಿ ಪಾಲಿಕೆ ವತಿಯಿಂದ ಬೇರೆ ಕಡೆ ಸ್ಥಳಾವಕಾಶವನ್ನು ನೀಡಬೇಕು. ಹೀಗಾಗಿ ಜನರು ಪಾದಚಾರಿ ಮಾರ್ಗದ ಬದಲಿಗೆ ರಸ್ತೆ ಮಧ್ಯೆ ಓಡಾಡುವ ಪರಿಸ್ಥಿತಿ ಸೃಷ್ಟಿಯಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಹೆಚ್ಚಿನ ಸ್ಥಳಾವಕಾಶವಿಲ್ಲದೆ ಸಮಸ್ಯೆಯಾಗುತ್ತಿದೆ. ಆಗಾಗ್ಗೆ ಸಣ್ಣಪುಟ್ಟ ಅಪಘಾತ ಸಂಭವಿಸುತ್ತಿವೆ. ಇದು ವಾಹನ ಸವಾರರು ಮತ್ತು ಜನರ ನಡುವೆ ಸಂಘರ್ಷಕ್ಕೆ ದಾರಿ ಮಾಡಿ ಕೊಡುತ್ತಿದೆ.ಪಾದಚಾರಿ ಮಾರ್ಗದಲ್ಲಿ ತಾತ್ಕಾಲಿಕವಾಗಿ ಮಳಿಗೆ ಇಟ್ಟುಕೊಂಡು ಮತ್ತು ಕೈಗಾಡಿಗಳಲ್ಲಿ ವಹಿವಾಟು ನಡೆಸುತ್ತಿದ್ದಾರೆ. ಈ ಸಮಸ್ಯೆಯನ್ನು ಸಂಬಂಧಪಟ್ಟಂತಹ ಅಧಿಕಾರಿಗಳು ಬಗೆಹರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ನೊಂದ ನಾಗರಿಕರು, ರಾಜೇಂದ್ರನಗರ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ತಂಬಾಕಿನ ಸಂಗ ಬದುಕೇ ಭಂಗ....

**ನಾವು
ಮೋಜು ಮಸ್ತಿಗಾಗಿ
ಮೊದಲು ಸಿಗರೇಟು ಸುಡುತ್ತೇವೆ.
ಆಮೇಲಾಮೇಲೆ
ಅದು
ನಮ್ಮನ್ನು ಸುಡುತ್ತಾ ಹೋಗುತ್ತೆ
ಕೊನೆ ಕೊನೆಗೆ
ಚೆಂದದ ಬದುಕಿಗೆ ಕೊಳ್ಳಿಯಿಡುತ್ತೆ!**



ಮೇ 31 ವಿಶ್ವ ತಂಬಾಕು ರಹಿತ ದಿನ. ತನ್ನಿಮಿತ್ತ ಈ ಲೇಖನ.

> "
> **ಹಲವಾರು ಬಗೆಯ ಕ್ಯಾನ್ಸರ್, ಹೃದಯಾಘಾತ, ಅಧಿಕ ರಕ್ತದೊತ್ತಡ, ಲಕ್ವ, ಶ್ವಾಸಕೋಶದ ಕಾಯಿಲೆಗಳು, ಹಲ್ಲುಗಳು ಹಳದಿ ಬಣ್ಣತಾಳುವುದು. ಕಾಲುಕೊಳೆಯುವುದು, ನಪುಂಸಕತ್ವ, ಬಂಜೆತನ, ಮಾನಸಿಕ ಖಿನ್ನತೆ ಮುಂತಾದ ಕಾಯಿಲೆಗಳೆಲ್ಲಕ್ಕೂ ಬಹುಪಾಲು ತಂಬಾಕು ಸೇವನೆಯೇ ಕಾರಣ. ಈಗ ಹೇಳಿ ಇಂತಹ ತಂಬಾಕು ಸೇವನೆ ನಮಗೆ ಬೇಕೆ? ಹಾಗಾಗಿ ಇಂಥಾ ಅಪಾಯಕಾರಿ ದುಷ್ಟ ತಂಬಾಕನ್ನು ಹಿಮ್ಮೆಟ್ಟಿಸಲು ಜಾಗೃತಿಯ ಅಸ್ತ್ರವಾಗಿ ಇಡೀ ಜಗತ್ತು ಮೇ 31ನ್ನು ವಿಶ್ವ ತಂಬಾಕು ರಹಿತ ದಿನವಾಗಿ ಆಚರಿಸುತ್ತಿದೆ.**

ಇದು ತೊಂಬತ್ತರ ದಶಕದಲ್ಲಿ 'ಬಲಿ' ಶೀರ್ಷಿಕೆಯಲ್ಲಿ ತಂಬಾಕಿನ ದುಷ್ಪರಿಣಾಮದ ಬಗ್ಗೆ ನಾನು ಬರೆದಿದ್ದ ಕವಿತೆಯೊಂದರ ಕೆಲವು ಸಾಲುಗಳು. ಅಚ್ಚರಿಯೆಂದರೆ ಅವತ್ತಿನಿಂದ ಇವತ್ತಿನ ತನಕ ಪರಿಸ್ಥಿತಿ ಮಾತ್ರ ಕಿಂಚಿತ್ತೂ ಬದಲಾಗಿಲ್ಲ. ಬದಲಿಗೆ ತಂಬಾಕು ಮತ್ತು ಅದರ ಅಪಾಯಕಾರಿ ಉತ್ಪನ್ನಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಇದರ ಸೇವನೆಯಿಂದ ಮನುಷ್ಯನ ಜೀವ–ಜೀವನ ಬಲಿಯಾಗುತ್ತಲೇ ಇದೆ.

ಘಟನೆ ಒಂದು: ಆತ ಒಂದು ಖಾಸಗಿ ಕಾರ್ಖಾನೆಯ ಕಾರ್ಮಿಕ. ಕಟ್ಟು ಮಸ್ತಾದ ದೇಹ. ಸ್ಪುರದ್ರೂಪಿ, ದಣಿವರಿಯದ ದುಡಿಮೆ, ವಯಸ್ಸು ಕೇವಲ ಮೂವತ್ತು ವೃದ್ಧ ತಂದೆ–ತಾಯಿ, ಚೆಂದುಳ್ಳಿ ಚೆಲುವೆಯಂಥಾ ಹೆಂಡತಿ, 'ಆರತಿಗೊಂದು ಕೀರುತಿಗೊಂದು ಎಂಬಂತೆ ಎರಡು ಮುತ್ತಿನಂಥ ಮಕ್ಕಳು. ಎಲ್ಲರೂ 'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎನ್ನುವ ಇತಿ ಮಿತಿಯ ಜಾಯಮಾನದವರು. ಆಡಂಬರಕ್ಕೆ ಅವಕಾಶವಿಲ್ಲ. ಸರಳ ಜೀವನಕ್ಕೆ ಕಿಂಚಿತ್ತೂ ಕೊರತೆ ಇಲ್ಲ. 'ಸ್ವರ್ಗಕ್ಕೆ ಕಿಚ್ಚು ಹಚ್ಚು' ಎಂದೆನ್ನಬುದಾದ ಆತನ ಇಂತಹ ಸುಖೀ ಸಂಸಾರದ ಮೇಲೆ ತಂಬಾಕಿನ ಕ್ರೂರ ದೃಷ್ಟಿ ಬಿತ್ತು. ಆತ ತಾನು ಕೆಲಸ ಮಾಡುತ್ತಿದ್ದ ಕಾರ್ಖಾನೆಯಲ್ಲಿನ ಕೆಲ ಸ್ನೇಹಿತರ ಸಹವಾಸದಿಂದ ಸಿಗರೇಟು ಸೇದುವುದನ್ನು ಕಲಿತ. ಇದು ಬರಬರುತ್ತಾ ಚಟವಾಯಿತು. ಹೊಟ್ಟೆಗೆ ಊಟವಿಲ್ಲದಿದ್ದರೂ ಸಿಗರೇಟ್ ಮಾತ್ರ ಬೇಕೇಬೇಕು ಎಂಬಷ್ಟರ ಮಟ್ಟಿಗೆ ಅದಕ್ಕೆ ದಾಸನಾದ. ಮಕ್ಕಳೆಂಬುದನ್ನೂ ನೋಡದೆ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಬಾರಿಸುವುದು. ಹೆಂಡತಿಯ ಪಾಲಿಗಂತೂ ರಾಕ್ಷಸನೇ ಆಗಿಬಿಟ್ಟ.

"ಹೇಗಿದ್ದವನು ಹೇಗಾಗಿ ಬಿಟ್ಟ...." ಎಂದು ಊರಿಗೆ ಊರೇ ಮಾತನಾಡತೊಡಗಿತು. ಆರಂಭದಲ್ಲಿ ಒಂದು ಎರಡು ನಾಲ್ಕೈದು ಎನ್ನುತ್ತಿದ್ದವನು ಈಗ ಪ್ಯಾಕುಗಳ ಲೆಕ್ಕದಲ್ಲಿ ಸಿಗರೇಟು ಸೇದುತ್ತಲೇ ಹೊಗೆಯೊಡನೆ ಮೈಮರೆತ. ಕಾರ್ಖಾನೆಗೆ ಕೆಲಸಕ್ಕೂ ಹೋಗದೆ ಸಂಬಳವಿಲ್ಲದೆ ಕೈನಲ್ಲಿ ಕಾಸಿಲ್ಲದೆ ಬರಿಗೈದಾಸನಾದ. ಚಟ ಬಿಡಲಾಗದೆ ಸಾಲಗಾರನಾದ. ಸಾಲವೂ ಸಿಗದಿದ್ದಾಗ ಕಳ್ಳನಾದ. ಮನೆಯಲ್ಲಿದ್ದ ಪದಾರ್ಥಗಳನ್ನು ಕದ್ದೊಯ್ದು ಮಾರಿ ಸಿಗರೇಟ್ ಚಟ ತೀರಿಸಿಕೊಳ್ಳುತ್ತಿದ್ದ. ಕ್ರಮೇಣ ಕಡಿಮೆ ಕಾಸಿನ ಬೀಡಿಗೆ ಬಂದ. ದಿನ ಕಳೆದಂತೆ ಆರೋಗ್ಯ ಕೆಟ್ಟಿತು. ಸ್ಪುರದ್ರೂಪಿಯಾಗಿದ್ದವನು ಸುಡುಗಾಡಿನ ಹೆಣದಂತಾದ. ಈಗ ಆತ ಬೀಡಿ, ಸಿಗರೇಟನ್ನು ಬಿಡಲು ಸಿದ್ಧನಿದ್ದ. ಇವ ಬಿಟ್ಟರೂ ಅದು ಬಿಡದಾಗಿತ್ತು.

ಒಂದು ದಿನ ಬರಿದಾದ ಆತನ ಮನೆಯಿಂದ ಬಾಯಿ ಬಡಿದು ಕೊಂಡು ಗೋಳಾಡಿ ಅಳುತ್ತಿರುವ ಜೋರುದನಿ ಕೇಳಿ ಬಂತು. ಆತ ಎದೆ ನೋವೆಂದು ವಿಲವಿಲನೆ ಒದ್ದಾಡುತ್ತಿದ್ದ. ಏನೂ ತೋಚದಂತಾಗಿ ವೃದ್ಧ ತಂದೆ–ತಾಯಿಗಳು ಗರಬಡಿದಂತೆ ನಿಂತಿದ್ದರು. ಹೆಂಡತಿ ಗಾಬರಿಯಿಂದ "ಬೇಗ ಬನ್ನಿ ಡಾಕ್ಟ್ರೇ...." ಎಂದು ಫೋನಿನಲ್ಲಿ ಆರ್ತನಾದ ಮಾಡುತ್ತಿದ್ದಳು. ಮಕ್ಕಳು ಭಯದಿಂದ ಅಳುತ್ತಿದ್ದವು. ಬೇಗನೆ ಡಾಕ್ಟ್ರೇನೋ ಬಂದರು. ಆಗಲೇ ಆತ ಸತ್ತು ಹೋಗಿದ್ದ.

ಘಟನೆ ಎರಡು: ರಾಮು ಎಂಬ ಎಂಟ್ಹತ್ತು ವರ್ಷದ ಹುಡುಗ. ರೈತ ಕುಟುಂಬದ ಅವಿದ್ಯಾವಂತ ತಂದೆ–ತಾಯಿಗಳಿಗೆ ಒಬ್ಬನೇ ಮಗ. ದುರಂತವೆಂದರೆ ಈ ಎಳೆ ವಯಸ್ಸಿನಲ್ಲೇ ಬೀಡಿ ಸೇದುವುದನ್ನು ಅಭ್ಯಾಸ ಮಾಡಿಕೊಂಡಿದ್ದ. ಈ ದುರಭ್ಯಾಸಕ್ಕೆ ಕಾರಣ ಅವನ ತಂದೆಯೇ ಆಗಿದ್ದ. ಬೀಡಿಯನ್ನು ತಿನ್ನುವ ಆಹಾರದಂತೆಯೇ ತನ್ನ ಬದುಕಿನ ಅವಿಭಾಜ್ಯ ಅಂಗ ಮಾಡಿಕೊಂಡಿದ್ದ ಅವನು ಪುಟ್ಟ ಮಗನಿದ್ದಾನೆಂಬುದನ್ನೂ ಅರಿಯದೆ ಮಗನ ಮುಂದೆಯೇ ಬೀಡಿ ಸೇದುತ್ತಿದ್ದ. ಇದನ್ನು ಸದಾ ಕುತೂಹಲದ ಕಂಗಳಿಂದ ರಾಮು ನೋಡುತ್ತಿದ್ದ. ಒಮ್ಮೆ ಅವನಿಗೆ ಕುತೂಹಲ ತಡೆಯಲಾಗಲಿಲ್ಲ. ಕೂಡಲೇ ತಂದೆ ಸೇದಿ ಬಿಸಾಡಿದ್ದ ಮೋಟು ಬೀಡಿಯನ್ನೆತ್ತಿಕೊಂಡು ಯಾರಿಗೂ ಕಾಣದಂತೆ ಬಾಯಿಗಿಟ್ಟುಕೊಂಡು ತಂದೆಯಂತೆಯೇ ಜೋರಾಗಿ ದಂ ಎಳೆದ. ಒಂದು ರೀತಿ ಮತ್ತು ಬಂದಂತೆ ಖುಷಿಯ ಆಹ್ಲಾದ ಸಿಕ್ಕಿತು. ಅವತ್ತಿನಿಂದ ರಾಮು, ತಂದೆಯ ಮೋಟು ಬೀಡಿಗಳ ಜೊತೆಗೆ ಇತರರು ಸೇದಿ ಬಿಸಾಡಿದ್ದ ಮೋಟು ಬೀಡಿಗಳನ್ನು ಬೀದಿಯಲ್ಲಿ ಆಯ್ದುಕೊಂಡು ಸೇದತೊಡಗಿದ. ದಿನ ಕಳೆದಂತೆ ಮೋಟು ಬೀಡಿಗಳನ್ನು ಬಿಟ್ಟು ನೇರವಾಗಿ ತಂದೆಯ ಜೇಬಿನಲ್ಲಿದ್ದ ಬೀಡಿಯ ಕಟ್ಟನ್ನೇ ಕದ್ದು ಸೇದತೊಡಗಿದ.

ಹೀಗೆ ಬೀಡಿಯ ಚಟಕ್ಕೆ ಬಿದ್ದ ಮಗನನ್ನು ಸರಿದಾರಿಗೆ ತರಲು ತಂದೆ ತಾಯಿಗಳಿಬ್ಬರೂ ಬೇಕಾದಷ್ಟು ಸರ್ಕಸ್ ಮಾಡಿದರು. ಆದರೆ ಪ್ರಯೋಜನವಾಗಲಿಲ್ಲ. 'ದರಿದ್ರಕ್ಕೆ ಅಧಿಕ ಮಾಸ' ಎಂಬ ಹಾಗೆ ಇದೇ ಸಮಯಕ್ಕೆ ಸರಿಯಾಗಿ ರಾಮುವಿನ ತಂದೆಗೆ ಬೀಡಿಯ ಚಟದಿಂದಾಗಿ ಶ್ವಾಸಕೋಶದ ಕ್ಯಾನ್ಸರ್ ಬಂದು ಬಿಡ್ತು. ಬಂದಷ್ಟೇ ವೇಗದಲ್ಲಿ ಅದು, ರಾಮುವಿನ ತಂದೆಯನ್ನು ಬಲಿತೆಗೆದುಕೊಂಡಿತು. ತಂದೆಯ ಸಾವಿಗೆ ರಾಮು ಬೇಕಾದಷ್ಟು ಅತ್ತ. ಆದರೆ ಬೀಡಿಯಿಂದಲೇ ತಂದೆ ಸತ್ತದ್ದೆಂದು ತಿಳಿದಿದ್ದರೂ ಅದನ್ನು ಇವನು ಬಿಡಲಾರದೆ ಹೋದ. ಕೊನೆಗೆ ರಾಮು ರಕ್ತದ ಕ್ಯಾನ್ಸರ್‌ಗೆ ತುತ್ತಾದ. ಮಗನನ್ನು ಉಳಿಸಿಕೊಳ್ಳಲು ತಾಯಿ ಎಷ್ಟು ಹೆಣಗಾಡಿದರೂ, ವ್ಯರ್ಥವಾಯಿತು. ಒಂದೇ ವರ್ಷದಲ್ಲಿ ಅವನು ನರಳಿ ನರಳಿ ಸಾವಿಗೀಡಾದ. ಬೀಡಿಯ ಚಟಕ್ಕೆ ಬಿದ್ದು ತಮ್ಮ ಕೈಯ್ಯಾರೆ ಕ್ಯಾನ್ಸರ್ ತಂದು ಕೊಂಡು ಸಾವನ್ನಪ್ಪಿದ ಗಂಡ ಹಾಗೂ ಮಗನನ್ನು ಕಳೆದುಕೊಂಡ ಆ ತಾಯಿ ದುಃಖದಲ್ಲಿ ಕೊರಗಿ ಕೊರಗಿ ಅವಳೂ ಕೂಡ ಸಾವಿಗೀಡಾದಳು!

ಕರಳು ಹಿಂಡುವಂತಹ ಇವೆರಡು ಘಟನೆಗಳು ಬೀಡಿ, ಸಿಗರೇಟಿನ ಅರ್ಥಾತ್ ತಂಬಾಕಿನ ದುಷ್ಪರಿಣಾಮವನ್ನು ಸಾರಿ ಹೇಳುತ್ತವೆ. ಅಷ್ಟೇ ಅಲ್ಲ ತಂಬಾಕಿನಲ್ಲಿರುವ ಜೀವ ತೆಗೆಯುವ ಅಪಾಯಕಾರಿ ವಸ್ತುಗಳ ಬಗ್ಗೆ ತಿಳಿಸಿಕೊಡುತ್ತವೆ. ಇಂಥಾ ನೂರಾರು, ಸಹಸ್ರಾರು ಘಟನೆಗಳು ಇವತ್ತು ಒಂದಲ್ಲಾ ಒಂದು ರೀತಿಯಲ್ಲಿ ಜಗತ್ತಿನಲ್ಲಿ ಪ್ರತಿನಿತ್ಯ ಜರುಗುತ್ತಿವೆ. ಅಷ್ಟರ ಮಟ್ಟಿಗೆ ತಂಬಾಕು ಎಂಬ ಹೆಮ್ಮಾರಿ ವಿಶ್ವವ್ಯಾಪಿಯಾಗಿದ್ದು ಆರೋಗ್ಯವಂತ ನಾಗರೀಕ ಸಮಾಜಕ್ಕೆ ಕಂಟಕ ಪ್ರಾಯವಾಗಿದೆ.

ಮೊದಲಿಗೆ ಅಮೇರಿಕಾದ ಮೂಲನಿವಾಸಿಗಳು ಕೊಲಂಬಸ್‌ನಿಗೆ ತಂಬಾಕಿನ ಎಲೆಯ ರುಚಿ ಹಿಡಿಸಿದರು. ಇದರಿಂದ ಮತ್ತು ಬರುವುದನ್ನು ಗುರುತಿಸಿ ಪರಿಚಯಿಸಿದ್ದರು. ಈಗ ಆ ಮತ್ತು ವಿವಿಧ ರೂಪಗಳಲ್ಲಿ ತನ್ನ ಕಬಂಧ ಬಾಹುಗಳಿಂದ ಜಗತ್ತನ್ನೇ ಹಿಡಿದು ಕೊಂಡಿದೆ. ಅತ್ಯಂತ ಅಪಾಯಕಾರಿಯಾದ 'ನಿಕೋಟಿನ್' ಸೇರಿದಂತೆ ಪಾಲಿನೊಕ್ಷಿಯರ್ ಅರೋಮ್ಯಾಟಿಕ್, ಹೈಡ್ರೋಕಾರ್ಬನ್ಸ್, ಬೀಟಾ ನ್ಯಾಫ್ಥಲಮೀನ್, ಬೆಂಜೋ ಫೈರಿನ್, ನಿಕೆಲ್, ಅರ್ಸೆನಿಕ್ ಲೋಹಗಳು ಫೀನೊಲ್, ಕ್ರೆಸೊಲ್, ಕ್ಯಾಟಿಕೋಲ್, ಇಂಡೋಲ್ ಹಾಗೂ ಕಾರ್ಬಜಾಲ್ ಮುಂತಾದ 300ಕ್ಕೂ ಅಧಿಕ ಕ್ಯಾನ್ಸರ್ ಉಂಟು ಮಾಡುವ ವಿಷಕಾರಿ ದ್ರವ್ಯಗಳನ್ನು ತನ್ನೊಡಲಲ್ಲಿ ಒಳಗೊಂಡಿರುವ ತಂಬಾಕು ಮನುಕುಲವನ್ನು ನಲುಗಿಸುತ್ತಿದೆ.

ಸಿಗರೇಟ್, ಬೀಡಿ, ಚುಟ್ಟಾ, ಹುಕ್ಕಾ ಮುಂತಾದ ತಂಬಾಕಿನ ಉತ್ಪನ್ನಗಳನ್ನು ನಾವು ಸೇದುವ ಅಥವಾ ಸೇವಿಸುವ ಮೂಲಕ ನಮಗರಿವಿಲ್ಲದಂತೆ ನಾವೇ ಹಚ್ಚಿ ಸುಟ್ಟ ಬೆಂಕಿಯ ಹೊಗೆಯಲ್ಲಿ ನಿಕೋಟಿನ್ ಒಳಗೊಂಡಂತೆ ನಾಲ್ಕು ಸಾವಿರಕ್ಕೂ ಹೆಚ್ಚು ಅಪಾಯಕಾರಿ ಪದಾರ್ಥಗಳನ್ನು ನಮ್ಮ ಶ್ವಾಸನಾಳಗಳು ಹೀರಿ ದೇಹದೊಳಕ್ಕೆ ಬಿಟ್ಟುಕೊಳ್ಳುತ್ತವೆ. ಇವೆಲ್ಲವೂ ಕ್ಯಾನ್ಸರ್ ಬರಿಸುವ, ಹೃದಯಾಘಾತ ಉಂಟು ಮಾಡುವ ತನ್ಮೂಲಕ ಜೀವತೆಗೆಯುವ ವಿಷಕಾರಕ ವಿಚ್ಛಿದ್ರಶಕ್ತಿಗಳಾಗಿವೆ. ತಜ್ಞರು ಹೇಳುವಂತೆ ನಿರಂತರ ಧೂಮಪಾನ ಮಾಡುವವರು ವಾರಕ್ಕೆ ಒಂದು ಅಥವಾ ಎರಡು ದಿನದ ಆಯುಷ್ಯವನ್ನು ಕಳೆದುಕೊಳ್ಳುತ್ತಾರಂತೆ! ಪ್ರತಿವರ್ಷ ಜಗತ್ತಿನಲ್ಲಿ 60 ಲಕ್ಷಕ್ಕೂ ಅಧಿಕ ಮಂದಿ ತಂಬಾಕು ಸೇವನೆಯಿಂದ ಸಾವನ್ನಪ್ಪುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ 2030ರ ಹೊತ್ತಿಗೆ ಸುಮಾರು ಒಂದು ಕೋಟಿ ಜನ ತಂಬಾಕು ಸೇವನೆಯಿಂದ ಸಾಯುವ ಸಾಧ್ಯತೆಗಳಿವೆ. ನಮ್ಮ ಭಾರತದ ಬಗ್ಗೆ ಹೇಳುವುದಾದರೆ ಪ್ರತಿವರ್ಷ ತಂಬಾಕು ಸೇವನೆಯಿಂದ 10 ಲಕ್ಷಕ್ಕೂ ಹೆಚ್ಚು ಮಂದಿ ಸಾವಿಗೀಡಾಗುತ್ತಿದ್ದಾರೆ. ಪ್ರತಿ ನಿತ್ಯ 2200ಕ್ಕೂ ಅಧಿಕ ಭಾರತೀಯರು ಇದರಿಂದ ಸಾಯುತ್ತಿದ್ದಾರೆ. ಪ್ರತಿ ನೂರು ಕ್ಯಾನ್ಸರ್ ಪ್ರಕರಣಗಳಲ್ಲಿ 40 ತಂಬಾಕು ಸೇವನೆಗೆ ಸಂಬಂಧಿಸಿದ್ದಾಗಿರುತ್ತದೆ. ಬಾಯಿ ಕ್ಯಾನ್ಸರ್‌ಗಂತೂ ಶೇಕಡ 95 ತಂಬಾಕು ಸೇವನೆಯೇ ಕಾರಣವಾಗಿದೆ.

ಹಲವಾರು ಬಗೆಯ ಕ್ಯಾನ್ಸರ್, ಹೃದಯಾಘಾತ, ಅಧಿಕ ರಕ್ತದೊತ್ತಡ, ಲಕ್ವ, ಶ್ವಾಸಕೋಶದ ಕಾಯಿಲೆಗಳು, ಹಲ್ಲುಗಳು ಹಳದಿ ಬಣ್ಣತಾಳುವುದು. ಕಾಲುಕೊಳೆಯುವುದು, ನಪುಂಸಕತ್ವ, ಬಂಜೆತನ, ಮಾನಸಿಕ ಖಿನ್ನತೆ ಮುಂತಾದ ಕಾಯಿಲೆಗಳೆಲ್ಲದಕ್ಕೂ ಬಹುಪಾಲು ತಂಬಾಕು ಸೇವನೆಯೇ ಕಾರಣ. ಈಗ ಹೇಳಿ ಇಂತಹ ತಂಬಾಕು ಸೇವನೆ ನಮಗೆ ಬೇಕೆ? ಹಾಗಾಗಿ ಇಂಥಾ ಅಪಾಯಕಾರಿ ದುಷ್ಟ ತಂಬಾಕನ್ನು ಹಿಮ್ಮೆಟ್ಟಿಸಲು ಜಾಗೃತಿಯ ಅಸ್ತ್ರವಾಗಿ ಇಡೀ ಜಗತ್ತು ಮೇ 31ನ್ನು ವಿಶ್ವ ತಂಬಾಕು ರಹಿತ ದಿನವಾಗಿ ಆಚರಿಸುತ್ತಿದೆ. ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯಾದ ವಿಶ್ವ ಆರೋಗ್ಯ ಸಂಸ್ಥೆಯು 1987 ಮೇ 15ರಂದು ಗೊತ್ತುವಳಿಯೊಂದನ್ನು ಅಂಗೀಕರಿಸಿ, 1988 ಏಪ್ರಿಲ್ 7ರಂದು 'ವಿಶ್ವ ತಂಬಾಕು ರಹಿತ ದಿನ'ವನ್ನಾಗಿ ಆಚರಿಸಲು ವಿಶ್ವದ ಎಲ್ಲಾ ದೇಶಗಳಿಗೂ ಸೂಚಿಸಿತು. ತದನಂತರ ಮುಂದೆ 1989 ಮೇ 17ರಂದು ವಿಶ್ವ ಆರೋಗ್ಯ ಸಂಸ್ಥೆ ಮತ್ತೊಂದು ಗೊತ್ತುವಳಿ ಅಂಗೀಕರಿಸಿ, ಪ್ರತಿ ವರ್ಷ ಮೇ 31ರಂದು 'ವಿಶ್ವ ತಂಬಾಕು ರಹಿತ ದಿನ' ಆಚರಿಸಲು ನಿರ್ಧರಿಸಿ ಎಲ್ಲಾ ರಾಷ್ಟ್ರಗಳಿಗೂ ಸೂಚನೆ ಕೊಟ್ಟಿತು. ಅಂದಿನಿಂದ ಪ್ರತೀವರ್ಷ ಮೇ 31ರಂದು ಜಗತ್ತು 'ವಿಶ್ವ ತಂಬಾಕು ರಹಿತ ದಿನ' ಆಚರಿಸುತ್ತಿದೆ. ತಂಬಾಕು ತ್ಯಜಿಸಲು ಇಂದೇ ನಾವು ಸಂಕಲ್ಪ ಮಾಡೋಣ. ತಂಬಾಕು ರಹಿತ ಸಮಾಜ ಕಟ್ಟೋಣ.

ಮಹಿಳೆಯ ಅತ್ಯಾಚಾರದ ಬಳಿಕ ಹತ್ಯೆ; ಆರೋಪಿಗಳ ಬಂಧನ, ಅವರಿಗೆ 20 ವರ್ಷ ಶಿಕ್ಷೆ ಹಿಂದೆ 'ಭೀಮ' ಬಲ!





ಮೈಸೂರು, ಮೇ 30(ಆರ್‌ಕೆ)– ಅಪರಾಧಿಗಳ ಜಾಡನ್ನು ಕರಾರುವಾಕ್ಕಾಗಿ ಪತ್ತೆ ಮಾಡಿ ಪೊಲೀಸ್ ಇಲಾಖೆಗೆ ಬೆನ್ನೆಲುಬಾಗಿ ನಿಂತಿದ್ದ ಮೈಸೂರು ಶ್ವಾನ ದಳದ 'ಭೀಮ' ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಆಕೆಯ ಸಾವಿಗೆ ಕಾರಣರಾದ ಕಾಮುಕರ ಪತ್ತೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ಆರೋಪಿಗಳಿಗೆ ಕೋರ್ಟ್ 20 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಮೈಸೂರಿನ ಬಿ.ಎನ್.ರಸ್ತೆಯಲ್ಲಿ ದೇವರಾಜ ಠಾಣೆ ಪೊಲೀಸರು ಗಸ್ತು ತಿರುಗುತ್ತಿದ್ದ ವೇಳೆ ಅಂಗಡಿಯೊಂದರ ಬಳಿ ನಿಂತಿದ್ದ ಮೂವರು ವ್ಯಕ್ತಿಗಳು ಪೊಲೀಸರನ್ನು ಕಂಡು ಪರಾರಿಯಾಗಿದ್ದರು. ಅಂಗಡಿ ಮುಂಭಾಗದ ಫುಟ್‌ಪಾತ್‌ನಲ್ಲಿ ಅರೆಬೆತ್ತಲೆಯಾಗಿ ಬಿದ್ದಿದ್ದ ಮಹಿಳೆಯ ಉಸಿರಿರಲಿಲ್ಲ. ದೇವರಾಜ ಠಾಣೆ ಅಂದಿನ ಇನ್ಸ್‌ಪೆಕ್ಟರ್ ದಿವಾಕರ್ ವಿಷಯ ತಿಳಿಸಲಾಗಿ ತಕ್ಷಣ ಸ್ಥಳಕ್ಕೆ ಆಗಮಿಸಿದ್ದ ಅವರು, ಶ್ವಾನ ದಳ ಕರೆಸಿದ್ದರು.

ಹ್ಯಾಂಡ್ಲರ್‌ಗಳಾದ ಬಸಂತ ಕುಮಾರ್ ಮತ್ತು ವಸಂತ ಕುಮಾರ್ ಅವರೊಂದಿಗೆ ಬಂದ ಭೀಮ, ಪ್ರಾರಂಭದಲ್ಲಿ ಸ್ವಲ್ಪ ತಿಣಕಾಡಿದರೂ, ದುಷ್ಕರ್ಮಿಗಳ ವಾಸನೆಯನ್ನು ಗ್ರಹಿಸಿ, ಹೆಜ್ಜೆ ಹಾಕುತ್ತಾ ಹೋಗಿ ಸುಮಾರು ಅರ್ಧ ಕಿ.ಮೀ. ಅಂತರದಲ್ಲಿದ್ದ ಸರ್ಕಾರಿ ಅತಿಥಿ ಗೃಹದ ದಕ್ಷಿಣ ಗೇಟ್ ಎದುರು ಮಿನಿ ವಿಧಾನಸೌಧ ಬಳಿ ಫುಟ್‌ಪಾತ್ ಮೇಲೆ ಮಲಗಿದ್ದ ಇಬ್ಬರು ದುಷ್ಕರ್ಮಿಗಳ ಅಂಗಿಯನ್ನು ಹಿಡಿದು ಎಳೆದಿದ್ದಲ್ಲದೇ ಬೊಗಳತೊಡಗಿತು. ಭೀಮನ ಆರ್ಭಟವನ್ನು ನೋಡಿಯೇ ಹೆದರಿದ ದುಷ್ಕರ್ಮಿಗಳು ತಾವೇ ಮಹಿಳೆ ಮೇಲೆ ಅತ್ಯಾಚಾರವೆಸಗಿದ್ದು ಎಂದು ಅರಚಾಡತೊಡಗಿದ್ದಾರೆ. ನಂತರ ಅವರನ್ನು ವಶಕ್ಕೆ ಪಡೆದು ಅವರು ನೀಡಿದ ಮಾಹಿತಿಯಂತೆ ಒಟ್ಟು ಐವರನ್ನು ಪೊಲೀಸರು ಬಂಧಿಸಿದ್ದರು. ಈ ಪ್ರಕರಣದ ತನಿಖೆಯನ್ನು ಲಷ್ಕರ್ ಠಾಣೆ ಅಂದಿನ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ನಡೆಸಿ, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದು, ಈಗ ಕಾಮುಕರಿಗೆ 20 ವರ್ಷ ಶಿಕ್ಷೆಯಾಗಿದೆ.

ಪತ್ತೇದಾರಿಕೆಯಲ್ಲಿ ಎತ್ತಿದ ಕೈ: ಭೀಮನಿಗೆ 3 ತಿಂಗಳಾಗಿದ್ದಾಗಲೇ ಕೆಸಿಎಸ್‌ನಿಂದ ಲೈಸೆನ್ಸ್ ಪಡೆದಿದ್ದ ಸಂಸ್ಥೆಯೊಂದರಿಂದ ಪೊಲೀಸ್ ಇಲಾಖೆಗೆ 2011ರಲ್ಲಿ ಖರೀದಿಸಲಾಗಿತ್ತು. ನಂತರ ಬೆಂಗಳೂರಿನ ಆಡುಗೋಡಿ ತರಬೇತಿ ಕೇಂದ್ರದಲ್ಲಿ 6 ತಿಂಗಳು ತರಬೇತಿ ನಂತರ ಮೈಸೂರಿಗೆ ಕರೆತಂದು ಅಪರಾಧ ಪತ್ತೆ ಕಾರ್ಯದಲ್ಲಿ ತೊಡಗಿಸಲಾಯಿತು. ಸಹಜವಾಗಿ ಶ್ವಾನ ದಳದ ಕರ್ತವ್ಯಾವಧಿ 10 ವರ್ಷ. ಭೀಮ ತನ್ನ 10 ವರ್ಷದ ಅವಧಿಯಲ್ಲಿ ಹಲವಾರು ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾನೆ. ಅಪರಾಧಿಗಳನ್ನು ಕರಾರುವಾಕ್ಕಾಗಿ ಪತ್ತೆ ಹಚ್ಚಿ, ಸೆರೆ ಹಿಡಿಯುವುದು ಅಪರೂಪ. ಭೀಮ ಈ ಪ್ರಕರಣದಲ್ಲಿ ಇಬ್ಬರು ಅಪರಾಧಿಗಳನ್ನು ತಾನೇ ಸೆರೆ ಹಿಡಿದು ಪೊಲೀಸರಿಗೆ ನೀಡುವ ಮೂಲಕ ಸಾಧನೆಗೈದಿದ್ದು, ಅದಕ್ಕಾಗಿ ನಗರ ಪೊಲೀಸ್ ಆಯುಕ್ತರಿಂದ ರಿವಾರ್ಡ್ ದೊರೆತಿದೆ.

10 ವರ್ಷ ಅವಧಿ ನಂತರ ಕರ್ತವ್ಯದಿಂದ ನಿವೃತ್ತಗೊಂಡ ಭೀಮನ ಕಾರ್ಯದಕ್ಷತೆಯನ್ನು ಗಮನಿಸಿ ಹಿರಿಯ ಪೊಲೀಸ್ ಅಧಿಕಾರಿಗಳು ಆತನಿಗೆ 6 ತಿಂಗಳು ಸೇವಾವಧಿ ವಿಸ್ತರಣೆ ಮಾಡಿ ನಂತರ 2022ರಲ್ಲಿ ನಿವೃತ್ತಿಗೊಳಿಸಿದ್ದರು. ನಿವೃತ್ತಿಯ ಕೆಲ ತಿಂಗಳಲ್ಲೇ ಭೀಮ ಕೊನೆಯುಸಿರೆಳೆದಿದ್ದು, ಮೈಸೂರು ಶ್ವಾನ ದಳದ ಕಾರ್ಯಾಚರಣೆಯಲ್ಲಿ ಭೀಮನ ಈ ಪತ್ತೆ ಕಾರ್ಯ ದಾಖಲೆಯಾಗಿಯೇ ಉಳಿದಿದೆ.

ವಿದೇಶಕ್ಕೆ ಹೋಗಲು ದರ್ಶನ್‌ಗೆ ಅನುಮತಿ



ದರ್ಶನ್

ಬೆಂಗಳೂರು, ಮೇ 30– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ನಟ ದರ್ಶನ್ ಸಿನಿಮಾ ಶೂಟಿಂಗ್‌ಗೆ ವಿದೇಶಕ್ಕೆ ಹೋಗಲು ಕೋರ್ಟ್ ಅನುಮತಿ ನೀಡಿದೆ. ಜುಲೈ 1ರಿಂದ ಜುಲೈ 27ರವರೆಗೆ ವಿದೇಶದಲ್ಲಿ ಸಿನಿಮಾ ಶೂಟಿಂಗ್ ಮಾಡಲು ಅವಕಾಶ ನೀಡಲಾಗಿದೆ. ಕೆಲವು ಷರತ್ತುಗಳನ್ನು ವಿಧಿಸುವ ಮೂಲಕ ದರ್ಶನ್ ಅವರಿಗೆ ಬೆಂಗಳೂರಿನ ಸಿಸಿಹೆಚ್ 57ನೇ ನ್ಯಾಯಾಲಯ ಅನುಮತಿ ಕೊಟ್ಟಿದೆ. ಇದರಿಂದ ದರ್ಶನ್ ಅವರು ಚಿಂತೆ ಇಲ್ಲದೇ ವಿದೇಶದಲ್ಲಿ 'ಡೆವಿಲ್' ಸಿನಿಮಾದ ಶೂಟಿಂಗ್ ಮಾಡಬಹುದಾಗಿದೆ.

ನ್ಯಾಯಾಲಯದಲ್ಲಿ ರೇಣುಕಾಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಮುಂದಿನ ವಿಚಾರಣೆಯ ದಿನಾಂಕದಲ್ಲಿ ದರ್ಶನ್ ಅವರು ತಪ್ಪದೇ ಹಾಜರಾಗಬೇಕು. ಈ ಷರತ್ತಿನ ಮೇರೆಗೆ ಅವರಿಗೆ ವಿದೇಶಕ್ಕೆ ಹೋಗಲು ನ್ಯಾಯಾಲಯ ಅನುಮತಿ ನೀಡಿದೆ. ದರ್ಶನ್ ಅವರು ರೇಣುಕಾಸ್ವಾಮಿ ಹತ್ಯೆ ಕೇಸ್‌ನಲ್ಲಿ ಅರೆಸ್ಟ್ ಆದ ಬಳಿಕ 'ಡೆವಿಲ್: ದಿ ಹೀರೋ' ಸಿನಿಮಾದ ಶೂಟಿಂಗ್ ನಿಂತಿತ್ತು. ಜಾಮೀನು ಸಿಕ್ಕ ಬಳಿಕ ಮತ್ತೆ ಶೂಟಿಂಗ್ ಆರಂಭಿಸಲಾಯಿತು.

ವಿದೇಶದಲ್ಲಿ ಕೂಡ 'ಡೆವಿಲ್': ದಿ ಹೀರೋ' ಸಿನಿಮಾದ ಚಿತ್ರೀಕರಣ ನಡೆಯಬೇಕಿದೆ. ಆ ಸಲುವಾಗಿ ಅನುಮತಿ ನೀಡಬೇಕು ಎಂದು ನ್ಯಾಯಾಲಯಕ್ಕೆ ದರ್ಶನ್ ಅರ್ಜಿ ಸಲ್ಲಿಸಿದ್ದರು. ದರ್ಶನ್ ಅವರ ಮನವಿಯನ್ನು ಕೋರ್ಟ್ ಪುರಸ್ಕರಿಸಿದೆ.

ನಾನು ಹೇಳಿದ್ದು ಸರಿ ಅಲ್ಲ ಎಂದು ಸಾಬೀತಾಗುವವರೆಗೂ ಕ್ಷಮೆ ಕೇಳಲ್ಲ

ಮತ್ತೇ ಉದ್ಧಟತನ ಮೆರೆದ ನಟ ಕಮಲ್ ಹಾಸನ್



ಕಮಲ್ ಹಾಸನ್

ಬೆಂಗಳೂರು, ಮೇ 30– ತಮಿಳಿನಿಂದ ಕನ್ನಡ ಭಾಷೆ ಹುಟ್ಟಿದೆ ಎಂದು ಹೇಳಿ ಕನ್ನಡಿಗರಿಂದ ಹಾಗೂ ಹಲವು ಭಾಷಾ ತಜ್ಞರಿಂದ ಛೀಮಾರಿಗೆ ಒಳಗಾಗಿರುವ ನಟ ಕಮಲ್ ಹಾಸನ್ ಮತ್ತೇ ಉದ್ಧಟತನ ಮೆರೆದಿದ್ದಾರೆ.

ನಾನು ಹೇಳಿದ್ದು ಸರಿ ಅಲ್ಲ ಎಂದು ಸಾಬೀತಾಗುವವರೆಗೂ ನಾನು ಯಾರ ಕ್ಷಮೆ ಕೇಳುವುದಿಲ್ಲ ಎಂದು ಇಂದು ಚೆನ್ನೈನಲ್ಲಿ ಸುದ್ದಿಗಾರರ ಎದುರು ನಟ ಹಾಗೂ ರಾಜಕಾರಣಿಯೂ ಆಗಿರುವ ಕಮಲ್ ಹೇಳಿದ್ದಾರೆ.

ಇದು ಪ್ರಜಾಪ್ರಭುತ್ವ ನಾನು ಸಂವಿಧಾನ ಮತ್ತು ಕಾನೂನಿನಲ್ಲಿ ನಂಬಿಕೆಯುಳ್ಳವನು. ನನ್ನ ಪ್ರೀತಿ ಕರ್ನಾಟಕಕ್ಕೆ, ಕನ್ನಡಕ್ಕೆ, ತೆಲುಗು, ಮಲಯಾಳಂಗೆ ಇದ್ದೇ ಇದೆ. ಅಜೆಂಡಾ ಇಟ್ಟು ರಾಜಕಾರಣ ಮಾಡುವವರನ್ನು ಹೊರತುಪಡಿಸಿ ಯಾರೂ ಇದನ್ನು ಅಲ್ಲಗಳೆಯುವುದಿಲ್ಲ ಎಂದು ಹೇಳಿದ್ದಾರೆ.

ವಿರೋಧಗಳು ಈ ಹಿಂದೆಯೂ ಸಾಕಷ್ಟು ಬಂದಿವೆ. ಒಂದು ವೇಳೆ ತಪ್ಪಾಗಿದ್ದರೆ ನಾನು ಕ್ಷಮೆ ಕೇಳುತ್ತೇನೆ. ಇಲ್ಲದಿದ್ದರೇ ಇಲ್ಲ. ಕನ್ನಡದ ವಿಷಯದಲ್ಲಿ ನಾನು ಹೇಳಿರುವುದು ಸರಿ ಅಲ್ಲ ಎಂದು ಎನ್ನುವವರೆಗೂ ನಾನು ಕ್ಷಮೆ ಕೇಳುವುದಿಲ್ಲ ಎಂದು ಹೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 31 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 45 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅನರ್ಹ ಬಿಪಿಎಲ್ ಕಾರ್ಡ್ ಮೊದಲು ರದ್ದು ಮಾಡಿ

● ಡಿಸಿ, ಎಸ್ಪಿ, ಸಿಇಓಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು ● ಅರ್ಹರಿಗಷ್ಟೇ ಸವಲತ್ತು ಒದಗಿಸುವ ಕಾರ್ಯವಾಗಬೇಕಿದೆ; ಎಲ್ಲಿಯೂ ದುರುಪಯೋಗವಾಗಬಾರದು



ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಡಿಸಿ, ಎಸ್ಪಿ, ಸಿಇಓಗಳ ಸಭೆ ನಡೆಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಡಿಸಿಎಂ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ. ಪರಮೇಶ್ವರ್ ಇನ್ನಿತರರಿದ್ದರು.

ಬೆಂಗಳೂರು, ಮೇ 30(ಕೆಎಂಶಿ)– ಗ್ಯಾರಂಟಿ ಯೋಜನೆಗಳು ಉಳ್ಳವರ ಪಾಲಾಗುವುದನ್ನು ತಪ್ಪಿಸಲು ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಜಿಲ್ಲಾಡಳಿತಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಇಂತಹ ಎಚ್ಚರಿಕೆ ನೀಡುವ ಮೂಲಕ ಗ್ಯಾರಂಟಿ ಯೋಜನೆಗಳಿಗೆ ಕಡಿವಾಣ ಹಾಕಲು ಮೊದಲ ಹೆಜ್ಜೆ ಇಟ್ಟಿದ್ದಾರೆ. ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಎರಡು ದಿನಗಳ ಹಿಂದಷ್ಟೇ ಅನರ್ಹರಿಗೆ ಗ್ಯಾರಂಟಿ ರದ್ದುಪಡಿಸುವ ಕುರಿತು ನೀಡಿದ ಹೇಳಿಕೆ ಬೆನ್ನಲ್ಲೇ ಸಿದ್ದರಾಮಯ್ಯ ಈ ಸಂದೇಶ ರವಾನೆ ಮಾಡಿದ್ದಾರೆ. ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಕಾರ್ಯನಿರ್ವಹಣಾಧಿಕಾರಿಗಳ ಎರಡು ದಿನಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲು ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಿದ್ದರೂ ನಿರೀಕ್ಷಿತ ಪ್ರಗತಿ ಏಕೆ ಸಾಧ್ಯವಾಗಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಸುಮಾರು ಶೇಕಡ 74ರಷ್ಟು ಬಿಪಿಎಲ್ ಕಾರ್ಡ್‌ಗಳಿದ್ದು ಅನರ್ಹರನ್ನು ಗುರುತಿಸಿ, ತೆಗೆದುಹಾಕುವ ಮೂಲಕ ಅರ್ಹರಿಗೆ ಸವಲತ್ತು ಒದಗಿಸುವ ಕಾರ್ಯ ನಡೆಯಬೇಕಿದೆ ಎಂದು ಸೂಚನೆ ನೀಡಿದರು. ನಾವು ಜನರ ತೆರಿಗೆ ದುಡ್ಡಿನಲ್ಲಿ ಆಡಳಿತ ನಡೆಸುತ್ತಿದ್ದೇವೆ. ಇಂತಹ ತೆರಿಗೆ ಹಣದಿಂದಲೇ ನಾವು ಮತ್ತು ನೀವು ಎಲ್ಲಾ ಸವಲತ್ತುಗಳನ್ನು ಅನುಭವಿಸುತ್ತಿರುವುದು. ▶ 9ನೇ ಪುಟಕ್ಕೆ

ಮಳೆ ಹಾನಿಗೆ ತಕ್ಷಣ ಪರಿಹಾರ ಕಲ್ಪಿಸಿ

ಬೆಂಗಳೂರು, ಮೇ 30(ಕೆಎಂಶಿ)– ಶತಮಾನದ ನಂತರ ಇದೇ ಮೊದಲ ಬಾರಿಗೆ ಮೇ ತಿಂಗಳಲ್ಲಿ ಭಾರೀ ಮಳೆ ಬಿದ್ದಿದ್ದು, ಅಪಾರ ನಷ್ಟ ಉಂಟಾಗಿದೆ. ತಕ್ಷಣವೇ ಪರಿಹಾರ ಒದಗಿಸಲು ಕ್ರಮಕೈಗೊಳ್ಳಿ ಎಂದು ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆದೇಶಿಸಿದ್ದಾರೆ.

ಮಳೆ ಹಾನಿ ಪರಿಹಾರ ಒದಗಿಸಲು ಅನುದಾನದ ಕೊರತೆ ಇಲ್ಲ, ಎಸ್‌ಡಿಆರ್‌ನಲ್ಲಿ ಒಂದು ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಹಣ ಪ್ರತೀ ಜಿಲ್ಲಾಡಳಿತದಲ್ಲಿದೆ. ▶ 9ನೇ ಪುಟಕ್ಕೆ

ಕಾನೂನು, ಸುವ್ಯವಸ್ಥೆ ಹದಗೆಟ್ಟರೆ ಅದಕ್ಕೆ ಡಿಸಿ, ಎಸ್‌ಪಿಯೇ ಹೊಣೆ

ಬೆಂಗಳೂರು: ಜಿಲ್ಲೆಯಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟರೆ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳೇ ನೇರ ಹೊಣೆ ಹೊರ ಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಎಚ್ಚರಿಸಿದ್ದಾರೆ.

ಪರಿಸ್ಥಿತಿ ಹದಗೆಟ್ಟರೆ ಅಭಿವೃದ್ಧಿ ಕುಂಠಿತವಾಗುತ್ತದೆ. ಜಿಲ್ಲಾಮಟ್ಟದ ಶಾಂತಿ ಸಮಿತಿ ಅಧ್ಯಕ್ಷರು ಜಿಲ್ಲಾಧಿಕಾರಿಗಳೇ ಆಗಿರುತ್ತಾರೆ. ಶಾಂತಿ ಕಾಪಾಡಲು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು, ಅದನ್ನು ಬಿಟ್ಟು ಶಾಂತಿಗೆ ಭಂಗ ಆದ ಮೇಲೆ ಪೋಸ್ಟ್ ಮಾರ್ಟಂ ಮಾಡಬೇಡಿ. ಜಿಲ್ಲಾ ವ್ಯಾಪ್ತಿಯಲ್ಲಿ ಯಾವುದು ಸೂಕ್ಷ್ಮ, ಯಾವುದು ಅತೀಸೂಕ್ಷ್ಮ ಎಂಬುದು ನಿಮಗೆ ತಿಳಿದಿರುತ್ತದೆ, ಕಿಡಿಗೇಡಿಗಳು ಒಂದಲ್ಲಾ ಒಂದು ಕಾರಣ ಮುಂದಿಟ್ಟುಕೊಂಡು ಶಾಂತಿ–ಸುವ್ಯವಸ್ಥೆ ಹಾಳು ಮಾಡಲು ನಿರಂತರ ಪ್ರಯತ್ನ ಮಾಡುತ್ತಿರುತ್ತಾರೆ. ಇಂತಹ ವರ ಬಗ್ಗೆ ಎಚ್ಚರ ವಹಿಸಿ. ಬಾಲ್ಯ ವಿವಾಹಗಳು ನಿರಂತರವಾಗಿ ನಡೆಯುತ್ತಿದ್ದರೂ ತಡೆಗಟ್ಟುವಲ್ಲಿ ವಿಫಲವಾಗಿರುವಿರಿ, ಕೆಲವು ಪ್ರಕರಣಗಳಲ್ಲಿ ಬಾಲ್ಯದಲ್ಲೇ ತಾಯಂದಿರಾಗಿರುವ ಘಟನೆಗಳು ಗಮನಕ್ಕೆ ಬಂದಿವೆ ಎಂದು ವಿಷಾದಿಸಿದರು.





ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ. ಕೆಲಸ ವಯಸ್ಸಾದವರನ್ನು ನೋಡಿಕೊಳ್ಳುವುದು ಮಗು ಬಾಣಂತಿ ಮನೆ ಕೆಲಸ ಅಡುಗೆ ಕೆಲಸ ಹಾಗೂ ANM GNM Staff ಬೇಕಾಗಿದ್ದಾರೆ.
ಸಮಯ: 8 ಗಂಟೆ ಅಥವಾ 24 ಗಂಟೆ
8123252840

ಬೇಕಾಗಿದ್ದಾರೆ
1. SWIMMING COACH (MALE)
2. LECTURE IN INFORMATION & COMMUNICATION TECHNOLOGY
3. LECTURE IN FORENSIC MEDICINE
4. HOUSE KEEPING (M/F) – 5
5. SECURITY GUARD – 5

9972837203
9036745292

Wanted Teachers
For SKY INSTITUTION
Ladies only.
Attractive salary.
Call: 9632159434

HOUSE FOR SALE
20x30 single floor MUDA allotment North facing
Vijayanagar 4th Stage, 2nd Phase, Mysore. Contact:
9449090047 / 9591566927

DTCP SITES FOR SALE
ಹುಣಸೂರಿನ ಕೋಟೆ ರಸ್ತೆಯ "VCR ದೇವಗಿರಿ" ಬಡಾವಣೆ ನಿವೇಶನಗಳು ಮಾರಾಟಕ್ಕಿವೆ.
9886048471, 9036291192

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಸೈಟು ಮಾರಾಟಕ್ಕಿದೆ
30x50 N/F, KBL Silicon City, Phase-2, BEML ಹತ್ತಿರ, KRS Road.
Mob: 9243536373

SITE FOR SALE
30X40, 40X60
Sri Rampura Ring Road and Srinagar Backside, Mysuru
8050345574

ರೇಡಿಯಂ ಸ್ಟಿಕ್ಕರ್ ಅಂಗಡಿಯಲ್ಲಿ
ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಸೂರ್ಯ ಬೇಕರಿ ಹತ್ತಿರ, ಹೆಬ್ಬಾಳ್, ಮೈಸೂರು
9731305656

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿಯಲ್ಲಿ 20 ಗುಂಟೆ ಜಮೀನು ಮಾರಾಟಕ್ಕಿದೆ. ನೇರ ಸಂಪರ್ಕಿಸಿ:
9731937223 / 8892581231

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮಾ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ಸುವರ್ಣಾ ಯಾತ್ರ
10 ದಿನಗಳ ಅಯೋಧ್ಯಾ, ಪೋಕ್ರ, ಮುಕ್ತಿನಾಥ, ಮನೋಕಾಮನ, ಕಠ್ಮಂಡು, ಚಿತ್ವಾನ್, ಜನಕ್ ಪುರ ಪ್ರವಾಸ 18/6/26.
7 ದಿನಗಳ ಕಾಶಿ ವಿಶ್ವನಾಥ, ಗಯಾ, ಬುದ್ಧ ಗಯಾ, ಬಾಬಾ ಬೈದ್ಯನಾಥ, ಪ್ರಯೋಗ್ ರಾಜ್, ನೈಮಿಶರಣ್ಯ, ಅಯೋಧ್ಯಾ ಪ್ರವಾಸ 23/6/25.
5 ದಿನಗಳ ದೆಹಲಿ, ಆಗ್ರಾ, ಮಥುರಾ, ಬೃಂದಾವನ, ಜೈಪುರ ಪ್ರವಾಸ 24/7/25
8660233673,9019462508

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

ಬಸವಮಾರ್ಗ ವ್ಯಸನಮುಕ್ತ ದೇವಸ್ಥಾನ
10 ದಿನಗಳ ಸಂಪೂರ್ಣ ಉಚಿತ ಕುಡಿತ ಬಿಡಿಸುವ ಶಿಬಿರ ಜೂ.1 ರಿಂದ 10ರ ವರೆಗೆ
88033-44999
97429-19191

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಮಯ: Full Time (ಉಚಿತ ಊಟ, ವಸತಿಯೊಂದಿಗೆ)
Day: 8am to 6pm,
Night: 7pm to 7am
ಸೌಲಭ್ಯಗಳು: ESI, PF and Attendance Bonus
9606514441,9606714441
08214242351

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages Also)
9343175000

AFFIDAVIT
I, SYEDA UMME HANI, D/o. SYED MUBASHIR PEERAN, 19 yrs residing at No. 91/92, LIG, KHB Colony, RS Naidunagar, Narasimharaja Mohalla, Mysore-570007, state on oath that, in my Passport bearing No. T4370764 issued by the Indian Embassy, Dubai, my name mentioned as SYEDA UMME HANI and Surname is not mentioned in my said passport, however my given name is UMME HANI and my surname is SYEDA vide affidavit sworn in before L.N. Rajendran dt: 23.5.2025

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ಅಂತಿಮ ದರ್ಶನ: ಡಾ. ಹೆಚ್‌ಎಸ್‌ವಿಯವರ ನಿಧನಕ್ಕೆ ನಾಡಿನ ಅನೇಕ ಗಣ್ಯರು, ಸಾಹಿತಿಗಳು ಕಂಬನಿ ಮಿಡಿದಿದ್ದು ಇಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಅಂತಿಮ ದರ್ಶನವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಹಿಂಭಾಗದ ಬಯಲು ರಂಗ ಮಂದಿರದಲ್ಲಿ ಏರ್ಪಡಿಸಲಾಗಿತ್ತು.

ಐದನೇ ಪುಟದಿಂದ

ಕಾರ್ಡ್ ಮೊದಲು ರದ್ದು ಮಾಡಿ

ಸರ್ಕಾರ ಯಾವ ವರ್ಗಕ್ಕೆ ಯೋಜನೆಗಳನ್ನು ರೂಪಿಸುತ್ತದೆಯೋ ಅದನ್ನು ಆ ಸಮುದಾಯಕ್ಕೆ ಮಾತ್ರವೇ ಮುಟ್ಟಿಸುವ ಜವಾಬ್ದಾರಿ ನಿಮ್ಮದು. ಗ್ಯಾರಂಟಿಯಲ್ಲಿನ ಕೆಲವು ಯೋಜನೆಗಳು ಅನರ್ಹರ ಪಾಲಾಗುತ್ತಿದೆ ಇದನ್ನು ಮೊದಲು ತಪ್ಪಿಸಲು ಸಮರೋಪಾದಿಯಲ್ಲಿ ಅನರ್ಹರ ಬಿಪಿಎಲ್ ಚೀಟಿಗಳನ್ನು ರದ್ದು ಮಾಡಿ ಎಂದರು.

ದಾಖಲೆಗಳ ಸಮರ್ಪಕವಾಗಿಡಿ: ನಿಮ್ಮಲ್ಲಿ ದಾಖಲೆಗಳು ಸರಿ ಇದ್ದರೆ, ಇಂತಹ ತಪ್ಪುಗಳು ನಡೆಯುವುದಿಲ್ಲ, ಮೊದಲು ದಾಖಲೆಗಳನ್ನು ಸಮರ್ಪಕವಾಗಿಡಿ. ನಿಮ್ಮ ಅಧೀನದಲ್ಲಿರುವ ಇಲಾಖೆಗಳು, ಅಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸುವುದನ್ನು ಖಾತ್ರಿ ಪಡಿಸಿಕೊಳ್ಳುವುದು ನಿಮ್ಮ ಜವಾಬ್ದಾರಿ ಎಂದರು. ನೀವು ದಕ್ಷತೆಯಿಂದ ಕಾರ್ಯನಿರ್ವಹಿಸದಿದ್ದರೆ, ಕೆಳಹಂತದ ಅಧಿಕಾರಿಗಳಿಂದ ಉತ್ತಮ ಕೆಲಸ ಪಡೆಯಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಸರ್ಕಾರದ ಯೋಜನೆಗಳ ಅನುಷ್ಠಾನದ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯ ಒದಗಿಸಲು ಒತ್ತು ಕೊಡಿ. ನೀವು ಕಚೇರಿಯಲ್ಲೇ ಇಡೀ ದಿನ ಕಾಲ ಕಳೆದರೆ, ಜಿಲ್ಲೆಯಲ್ಲಿ ಏನು ತೊಂದರೆ ಇದೆ, ಏನು ಸೌಕರ್ಯ ಕಲ್ಪಿಸಬೇಕು ಎಂಬ ಅರಿವು ಬರುವುದಿಲ್ಲ.

ನಾನು ಈ ಹಿಂದೆ ಹಲವು ಬಾರಿ ಶಾಲಾ ಕೊಠಡಿ, ಹಾಸ್ಟೆಲ್, ಆಸ್ಪತ್ರೆ, ಕೆರೆ–ಕಟ್ಟೆಗಳ ನಿರ್ವಹಣೆ ಮತ್ತು ಜನ ಸಾಮಾನ್ಯರಿಂದ ಅಹವಾಲುಗಳನ್ನು ಸ್ವೀಕರಿಸಿದರೆ ನಿಮಗೆ ಪರಿಸ್ಥಿತಿಯ ಅರಿವಾಗುತ್ತದೆ ಎಂಬುದಾಗಿ ತಿಳಿಸಿದ್ದೆ. ನಿಮ್ಮಲ್ಲಿ ಕೆಲವರು ಸಾರ್ವಜನಿಕರ ಕೈಗೇ ಸಿಗುವುದಿಲ್ಲ ಎಂಬ ಆರೋಪಗಳು ಬಂದಿವೆ. ಇದನ್ನು ಮೊದಲು ಸರಿಪಡಿಸಿಕೊಳ್ಳಿ ಎಂದರು.

ಕೆರೆ ಒತ್ತುವರಿ ತೆರವುಗೊಳಿಸಿ: ಗ್ರಾಮೀಣ ಭಾಗದಲ್ಲಿ ಕೆರೆ ಒತ್ತುವರಿ ತೆರವುಗೊಳಿಸದ ಜಿಲ್ಲಾಧಿಕಾರಿ ಮತ್ತು ಮುಖ್ಯಕಾರ್ಯನಿರ್ವಹಣಾ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಿ ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ಅವರಿಗೆ ಆದೇಶ ಮಾಡಿದರು. ತಾಲೂಕು ಮತ್ತು ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಉಳಿದು, ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಿ. ಕೆಲವು ಪ್ರಮಾಣಪತ್ರಗಳಿಗೆ ಅರ್ಜಿ ಸಲ್ಲಿಸಿದ ಒಂದು ತಿಂಗಳೊಳಗೆ ನೀಡಬೇಕು ಎಂದು ಕಟ್ಟಾದೇಶ ಮಾಡಿದರು.

ಫಲಿತಾಂಶ ಕಡಿತಕ್ಕೆ ಕಾರಣ ಕೇಳಿದ ಸಿಎಂ: ಸರ್ಕಾರ ನಮ್ಮ ಶಾಲಾ–ಕಾಲೇಜುಗಳಿಗೆ ಎಲ್ಲಾ ಮೂಲಸೌಕರ್ಯ ಕಲ್ಪಿಸಿದರೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಕಡಿಮೆಯಾಗಲು ಕಾರಣವೇನು? ಎಂದು ಜಿಲ್ಲಾಡಳಿತವನ್ನು ಪ್ರಶ್ನಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಿ ಎಂದರು.

ಜಿಲ್ಲಾಧಿಕಾರಿ, ಎಸಿ ಹಾಗೂ ತಹಸೀಲ್ದಾರ್ ಕೋರ್ಟ್‌ಗಳಲ್ಲಿ ವಿವಿಧ ಪ್ರಕರಣಗಳನ್ನು ಸರಿಯಾಗಿ ವಿಲೇವಾರಿ ಮಾಡಿ ಮೆರಿಟ್ ಮೇಲೆ ತೀರ್ಮಾನ ಕೈಗೊಳ್ಳಿ ಎಂದರು.

ಮಳೆ ಹಾನಿಗೆ ತಕ್ಷಣ ಪರಿಹಾರ ಕಲ್ಪಿಸಿ

ಅತೀವೃಷ್ಟಿಯಿಂದ ಹಾನಿಗೊಳಗಾದ ಮನೆಗಳಿಗೆ ಮಾರ್ಗಸೂಚಿಯಂತೆ ಪರಿಹಾರ ನೀಡಿ, ಭೂಕುಸಿತದಂತಹ ಪ್ರಕರಣಗಳಲ್ಲಿ ಸಾವಿನ ಸಂಭಾವ್ಯತೆ ತಪ್ಪಿಸಲು, ಜನರ ತೆರವು ಸೇರಿದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ಮಳೆ ಹಾನಿ ಪ್ರದೇಶಗಳಿಗೆ ಜಿಲ್ಲಾಧಿಕಾರಿ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಕಡ್ಡಾಯವಾಗಿ ತಕ್ಷಣ ಭೇಟಿ ನೀಡಿ ಅಗತ್ಯ ಪರಿಹಾರ ಒದಗಿಸಬೇಕು. ಸಂಪೂರ್ಣ ಮನೆ ಹಾನಿ ಪ್ರಕರಣಗಳಲ್ಲಿ 1.20 ಲಕ್ಷ ರೂ., ತಕ್ಷಣ ಪರಿಹಾರ ಒದಗಿಸಲಾಗುತ್ತಿದೆ. ಅಂತಹವರಿಗೆ ಹೊಸ ಮನೆ ಒದಗಿಸಲು ಕಳೆದ ವರ್ಷದಂತೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಅತೀವೃಷ್ಟಿ ಅನಾಹುತ ಎದುರಿಸಲು ಎಲ್ಲಾ ಗ್ರಾಮ ಪಂಚಾಯತ್ ಮಟ್ಟದಲ್ಲಿ ವಿವಿಧ ಇಲಾಖೆಗಳನ್ನು ಒಳಗೊಂಡ ಕಾರ್ಯ ಪಡೆ ರಚಿಸಲಾಗಿದ್ದು, ಅವರು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

ಮೈಸೂರು ಜಿಲ್ಲೆಯಲ್ಲಿ ಶಾಲೆಗಳು ಪುನರಾರಂಭ

ಶಾಲೆಗಳಿಗೆ ತಳಿರು ತೋರಣ, ರಂಗೋಲಿಯಿಂದ ಸಿಂಗರಿಸಿ ಮಕ್ಕಳಿಗೆ ಸ್ವಾಗತ



ಮೈಸೂರು, ಮೇ 30(ಆರ್‌ಕೆ)– ಬೇಸಿಗೆ ರಜೆ ಕಳೆದು, ಇಂದಿನಿಂದ ಶಾಲೆಗಳು ಪುನರಾರಂಭಗೊಂಡಿವೆ.

ಶಾಲೆಗಳನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸುವ ಮೂಲಕ ತಳಿರು ತೋರಣಗಳಿಂದ ಸಿಂಗರಿಸಿ ಆಯಾ ಕ್ಷೇತ್ರದ ಶಾಸಕರು, ಜನಪ್ರತಿನಿಧಿಗಳು, ಎಸ್‌ಡಿಎಂಸಿ ಪದಾಧಿಕಾರಿಗಳು ಹಾಗೂ ಶಿಕ್ಷಕರು ಮಕ್ಕಳನ್ನು ಮೊದಲ ದಿನವಾದ ಇಂದು ಆತ್ಮೀಯವಾಗಿ ಬರಮಾಡಿಕೊಂಡು, ಸಿಹಿ ನೀಡಿ, ಸಂಭ್ರಮಿಸಿದರು.

ಈಗಾಗಲೇ ಸರ್ಕಾರದಿಂದ ಪೂರೈಸಿರುವ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ಮಕ್ಕಳಿಗೆ ಕಲ್ಪಿಸಲಾಯಿತು. ಶಾಲಾ ಪ್ರಾರಂಭೋತ್ಸವದ ಹಿನ್ನೆಲೆಯಲ್ಲಿ ಮಕ್ಕಳಿಗೆ ಇಂದು ಕೇವಲ ಆಟೋಟ ಹಾಗೂ ಇನ್ನಿತರ ಪಠ್ಯೇತರ ಚಟುವಟಿಕೆ ನಡೆದವು. ನಾಳೆ (ಮೇ 31)ಯಿಂದ ಪಾಠ ಪ್ರವಚನಗಳು ನಿರಂತರವಾಗಿ ನಡೆಯುತ್ತವೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ಜಿಲ್ಲೆ ಉಪನಿರ್ದೇಶಕ ಜವರೇಗೌಡ ತಿಳಿಸಿದ್ದಾರೆ.

ಪ್ರಾಥಮಿಕ, ಮಾಧ್ಯಮಿಕ ಹಾಗೂ ಹೈಸ್ಕೂಲ್‌ಗಳಲ್ಲಿ ಶಾಲೆಗಳು ಆರಂಭವಾಗಿವೆಯಾದರೂ, ಮೊದಲ ದಿನವಾದ ಇಂದು ಮಳೆ ಹಿನ್ನೆಲೆಯಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇದೆ. ಸೋಮವಾರದಿಂದ ಮಕ್ಕಳು ಪೂರ್ಣ ಪ್ರಮಾಣದಲ್ಲಿ ಶಾಲೆಗೆ ಹಾಜರಾಗುತ್ತಾರೆ ಎಂದು ಜವರೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇಂದು ಹುಣಸೂರು ರಸ್ತೆಯಲ್ಲಿರುವ ಬೆಳವಾಡಿ ಶಾಲೆಗೆ ಭೇಟಿ ನೀಡಿದ್ದ ಡಿಡಿಪಿಐ ಜವರೇಗೌಡರು, ಸ್ವಚ್ಛತೆ, ಮೂಲ ಸೌಕರ್ಯ ಒದಗಿಸಿ ಸಿದ್ಧತೆ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಿದರು. ಕುಡಿಯುವ ನೀರು, ಶೌಚಾಲಯ, ಕೊಠಡಿಗಳಲ್ಲಿ ಬ್ಲಾಕ್‌ಬೋರ್ಡ್, ಲೇಖನ ಸಾಮಗ್ರಿಯಿಂದ ಮೂಲ ಸೌಕರ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳ ಅನುಕೂಲಕ್ಕೆ ಆಯಾ ಶಾಲೆಗಳಲ್ಲಿ ಶಿಕ್ಷಕರು ಶಾಲಾ ವಾತಾವರಣವನ್ನು ಸಜ್ಜುಗೊಳಿಸಿದ್ದಾರೆ.

ಮಕ್ಕಳನ್ನು ಶಾಲೆಗೆ ಸ್ವಾಗತಿಸಿದ ಶಾಸಕ ಕೆ.ಹರೀಶ್‌ಗೌಡರು

ಗುಲಾಬಿ, ಪಠ್ಯಪುಸ್ತಕ, ಸಮವಸ್ತ್ರ ನೀಡಿ ಶುಭ ಹಾರೈಕೆ

ಮೈಸೂರು, ಮೇ 30(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುಂಬಾರಕೊಪ್ಪಲಿನ ಪಿಎಂಶ್ರೀ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂ, ಪಠ್ಯಪುಸ್ತಕ ಹಾಗೂ ಸಮವಸ್ತ್ರ ನೀಡಿ ಸ್ವಾಗತಿಸಿದ ಶಾಸಕ ಕೆ.ಹರೀಶ್‌ಗೌಡ, ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಪ್ರಸಕ್ತ ವರ್ಷದ ಶಾಲೆಗಳ ಪ್ರಾರಂಭದ ಹಿನ್ನಲೆಯಲ್ಲಿ ಎರಡು ಶಾಲೆಗಳಿಗೆ ಭೇಟಿ ನೀಡಿದ ಅವರು, ಮೊದಲ ದಿನ ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ ಪ್ರೀತಿ ಪೂರ್ವಕ ಸ್ವಾಗತ ಕೋರಿದರು. ನಂತರ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ವಿತರಿಸಿ, ಚೆನ್ನಾಗಿ ಓದಿ ಉನ್ನತ ಹುದ್ದೆಗಳನ್ನು ಪಡೆದು ದೇಶಕ್ಕೆ ಕೊಡುಗೆ ನೀಡುವಂತೆ ಕಿವಿಮಾತು ಹೇಳಿದರು.

ಶಿಕ್ಷಣವೇ ಶಕ್ತಿ. ವಿದ್ಯಾರ್ಥಿಗಳಲ್ಲಿ ಜ್ಞಾನದ ಬೆಳಕು ಹೆಚ್ಚಾಗಬೇಕು. ಶಾಲೆಗಳು ಶಿಕ್ಷಣ ನೀಡುವ ಕೇಂದ್ರಗಳಾಗಿದ್ದು, ಅರ್ಹ ವಯಸ್ಸಿನ ಮಕ್ಕಳನ್ನು ಶಾಲೆಗೆ ಸೇರಿಸಿ, ಕಡ್ಡಾಯವಾಗಿ ಶಾಲೆಗೆ ಕಳುಹಿಸಬೇಕು ಎಂದು ಹೇಳಿದರು. ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ ಸೇರಿದಂತೆ ಶಾಲೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.



ಕುಂಬಾರಕೊಪ್ಪಲಿನ ಪಿಎಂಶ್ರೀ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಗುಲಾಬಿ ಹೂ, ಪಠ್ಯಪುಸ್ತಕ ಹಾಗೂ ಸಮವಸ್ತ್ರ ನೀಡಿ ಶಾಸಕ ಕೆ.ಹರೀಶ್‌ಗೌಡ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು.

ಸರ್ಕಾರಿ ಶಾಲೆಗಳ ಪ್ರಯೋಜನ ಪಡೆಯಿರಿ...

"ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಶೂ ಮತ್ತು ಸಾಕ್ಸ್ ಜೊತೆಗೆ ಮಧ್ಯಾಹ್ನದ ಬಿಸಿಯೂಟ ನೀಡುತ್ತಿದ್ದು, ಪೋಷಕರು ಸರ್ಕಾರಿ ಶಾಲೆಗಳ ಪ್ರಯೋಜನ ಪಡೆದುಕೊಳ್ಳಬೇಕು. ಸರ್ಕಾರಿ ಶಾಲೆಗಳಲ್ಲಿ ಓದಿದ ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲೂ ಉನ್ನತ ಸ್ಥಾನಗಳನ್ನು ಅಲಂಕರಿಸಿ ದೇಶಕ್ಕೆ ದೊಡ್ಡ ಮಟ್ಟದ ಕೊಡುಗೆ ನೀಡಿದ್ದಾರೆ. – ಕೆ.ಹರೀಶ್‌ಗೌಡ, ಶಾಸಕ

ಮೈಸೂರಲ್ಲಿ ಕೊಡವ ಹಾಕಿ ಪ್ರೀಮಿಯರ್ ಲೀಗ್

ನಾಳೆ ಆಟಗಾರರ ಹರಾಜು

ಮೈಸೂರು, ಮೇ 30– ಕೊಡವ ಸಮಾಜ ಯುವ ಘಟಕ, ಕೊಡವ ಸಮಾಜ ಮೈಸೂರು ಮತ್ತು ಮೈಸೂರು ಹಾಕಿ ಸಹಯೋಗದೊಂದಿಗೆ ಮೈಸೂರು ಕೊಡವ ಹಾಕಿ ಪ್ರೀಮಿಯರ್ ಲೀಗ್ ಪ್ರಸ್ತುತಪಡಿಸಲು ಸಜ್ಜಾಗಿದೆ.

ಪಂದ್ಯಾವಳಿಯು ಸಂಪ್ರದಾಯ, ಸಮುದಾಯ ಮನೋಭಾವ ಮತ್ತು ಕ್ರೀಡಾ ಕೌಶಲ್ಯ ಮೆರೆಯುವ ಗುರಿಯನ್ನು ಹೊಂದಿದ್ದು, ಹಾಕಿಯಲ್ಲಿ ಯುವಕರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಪಂದ್ಯಾವಳಿ ಆಯೋಜಿಸಲಾಗಿದೆ. ಈ ಪಂದ್ಯಾವಳಿಯು ಕೂರ್ಗ್ ಯುನೈಟೆಡ್, ಕೊಡವ ವಾರಿಯರ್ಸ್, ಪಾಲೆ ತಾಲೂಕು, ಸೌತ್ ಸೈಡ್ ರೇಂಜರ್ಸ್, ಟೀಂ ಕೊಡವ ಟ್ರೈಬ್, ಕನೆಕ್ಟಿಂಗ್ ಕೊಡವಾಸ್, ಅಂಜಿಗೇರಿ ನಾಡ್, ಕೂರ್ಗ್ ಟೈಟಾನ್ಸ್, ಕಾಕೋಟ್ ಸ್ಟ್ರೈಕರ್ಸ್ ಮತ್ತು ಎಂಟಿಬಿ ರಾಯಲ್ಸ್ ಎಂಬ 10 ಫ್ರಾಂಚೈಸಿಗಳನ್ನು ಒಳಗೊಂಡಿದೆ.

ಈ ತಂಡಗಳು ಜೂನ್ 27, 28 ಮತ್ತು 29 ರಂದು ಮೈಸೂರಿನ ಚಾಮುಂಡಿ ವಿಹಾರ್ ಕ್ರೀಡಾಂಗಣ ಕಿಕ್ಕಿರಿದ ಜನಸ್ತೋಮದ ನಡುವೆ ರೋಮಾಂಚಕಾರಿ ಪ್ರದರ್ಶನ ನೀಡಲಿವೆ. ಪಂದ್ಯಾವಳಿಗೂ ಮುನ್ನ ಕೆಎಚ್‌ಪಿಎಲ್ 2025ರ ಅಧಿಕೃತ ಆತಿಥ್ಯ ಪಾಲುದಾರ ಐಬಿಐಎಸ್ ಸ್ಟೈಲ್ಸ್ ಮೈಸೂರಿನಲ್ಲಿ ಜೂನ್ 1 ರಂದು ಆಟಗಾರರ ಹರಾಜು ನಡೆಯಲಿದೆ.

ಕೆಎಚ್‌ಪಿಎಲ್–2025ನ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಸಲುವಾಗಿ ಕರ್ನಾಟಕ ಹಾಕಿ ಗೌರವ ಕಾರ್ಯದರ್ಶಿ ಮತ್ತು ಮಾಜಿ ಹಾಕಿ ಒಲಂಪಿಯನ್ ಅಂಜಪರವಂಡ ಬಿ. ಸುಬ್ಬಯ್ಯ, ಮೈಸೂರು ಹಾಕಿ ಅಧ್ಯಕ್ಷ ಕೊಂಗಂಡ ದಿಲೀಪ್, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಂಡಂಡ ಬೋಪಣ್ಣ ಮತ್ತು ಉಪಾಧ್ಯಕ್ಷ ಕೋಟೇರ ಮುದ್ದಯ್ಯ ಸಲಹೆಗಾರರಾಗಿದ್ದಾರೆ.

ಇಂಡಿಯನ್ ಜೂನಿಯರ್ ಹಾಕಿ ಟೀಮ್ ಕೋಚ್ ಬೊಳ್ಳಿಯಪಂಡ ಜೆ. ಕಾರಿಯಪ್ಪ ಮತ್ತು ಮಾಜಿ ಇಂಡಿಯನ್ ಹಾಕಿ ಆಟಗಾರ ಕರಿನೇರವಂಡ ಸೋಮಣ್ಣ ಅವರು ತಂಡವನ್ನು ಮುನ್ನಡೆಸುವ ಮತ್ತು ಯುವ ಪ್ರತಿಭೆಗಳನ್ನು ರೂಪಿಸುವ ಮಾರ್ಗದರ್ಶಕರಾಗಿದ್ದಾರೆ.

ಲಿಂಗ ಸಮಾನತೆ ಬದ್ಧತೆಯನ್ನು ಪ್ರತಿಬಿಂಬಿಸುವ ಸಲುವಾಗಿ ಆಯೋಜಕರು ಹತ್ತು ತಂಡಗಳಲ್ಲಿ ಪ್ರತಿಯೊಂದರಲ್ಲೂ ಒಬ್ಬ ಮಹಿಳಾ ಹಾಕಿ ಆಟಗಾರ್ತಿಯನ್ನು ಸೇರಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿದ್ದಾರೆ. ಒಟ್ಟು ಹತ್ತು ಮಹಿಳಾ ಕ್ರೀಡಾಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿದ್ದಾರೆ. ಇದು ಕೊಡವ ಹಾಕಿ ಪಂದ್ಯಾವಳಿಯಲ್ಲಿಯೇ ಪ್ರಪ್ರಥಮ ಪ್ರಾತಿನಿಧ್ಯವಾಗಿದೆ. ಹೆಚ್ಚಿನ ಮಾಹಿತಿ ಗಾಗಿ ಕೆಎಸ್‌ವೈಡಬ್ಲ್ಯೂಎಂ ಅಧ್ಯಕ್ಷರಾದ ಕೊಟೇರ ವೇದಿತ್ ಉತ್ತಯ್ಯ ಅವರನ್ನು ಮೊ.ಸಂಖೆ 8880401206 ಮೂಲಕ ಸಂಪರ್ಕಿಸಬಹುದು.

ಮಳೆಯಿಂದ ಮಂಗಳೂರು ಬಳಿ ಗುಡ್ಡ ಕುಸಿದು ಅಜ್ಜಿ, ಮೊಮ್ಮಕ್ಕಳು ಸಾವು



ಮಂಗಳೂರು, ಮೇ 30– ಕರ್ನಾಟಕದ ಕರಾವಳಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭಾರೀ ಮಳೆಯಾಗುತ್ತಿದ್ದು, ಭೂಕುಸಿತ ಸಂಭವಿಸಿ ಮೂವರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಗುರುವಾರ ರಾತ್ರಿ, ಮಂಗಳೂರು ಸಮೀಪದ ಮಾಂಟೆಪದವು ಕೋಡಿಯಲ್ಲಿ ಭಾರೀ ಮಳೆಗೆ ಎರಡು ಮನೆಗಳ ಮೇಲೆ ಗುಡ್ಡ ಕುಸಿದು ಮೂವರು ಮೃತಪಟ್ಟಿದ್ದಾರೆ. ಇಬ್ಬರು ಮೊಮ್ಮಕ್ಕಳು ಸೇರಿ ಅಜ್ಜಿ ಮೃತಪಟ್ಟಿದ್ದು, ಐದು ಜನರು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ. ಒಬ್ಬ ಮಹಿಳೆ ಮತ್ತು ಆಕೆಯ ಮಗುವನ್ನು ಅವಶೇಷಗಳಿಂದ ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎನ್ನಲಾಗಿದೆ. ಮೃತರನ್ನು ಅಜ್ಜಿ ಪ್ರೇಮಾ ಪೂಜಾರಿ, ಮೊಮ್ಮಕ್ಕಳಾದ ಆರ್ಯನ್ ಮತ್ತು ಆರುಷ್ ಎಂದು ಗುರುತಿಸಲಾಗಿದೆ.

ಭಾರೀ ಮಳೆ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಮತ್ತು ಸ್ಥಳೀಯ ಪೊಲೀಸರು ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸಲು ನಿರಂತರ ಪ್ರಯತ್ನ ಮಾಡುತ್ತಿದ್ದಾರೆ.

ಘಟನೆಯ ಸಮಯದಲ್ಲಿ ಮನೆಯೊಳಗಿದ್ದ ಮತ್ತೊಬ್ಬ ಮಹಿಳೆ ಸಾವನ್ನಪ್ಪಿದ್ದು, ಭೂಕುಸಿತದ ಶಬ್ದ ಕೇಳಿ ಅವರ ಮಗ ಸೀತಾರಾಮ್ ಹೊರಗೆ ಧಾವಿಸಿ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಗಾಯಗೊಂಡಿದ್ದ ಕಾಂತಪ್ಪ ಪೂಜಾರಿ ಎಂಬ ಮತ್ತೊಬ್ಬ ವ್ಯಕ್ತಿಯನ್ನು ಸಹ ಸ್ಥಳೀಯರು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಇನ್ನು ಮಂಗಳೂರಿನ ದೇರಳಕಟ್ಟೆಯಲ್ಲಿ ಇಂದು ಬೆಳಗ್ಗೆ ಮನೆಯ ಮೇಲೆ ಕಾಂಪೌಂಡ್ ಗೋಡೆ ಕುಸಿದು ಆರು ವರ್ಷದ ಬಾಲಕಿ ಸಾವನ್ನಪ್ಪಿದ್ದಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಭೂಕುಸಿತ ಮತ್ತು ಗೋಡೆ ಕುಸಿತದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಜಿಲ್ಲಾಧಿಕಾರಿಗೆ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಅಗತ್ಯ ಕ್ರಮ ಕೈಗೊಂಡು ವರದಿ ನೀಡುವಂತೆ ಸೂಚಿಸಿದ್ದಾರೆ.

ಮೈಸೂರು ಮಿತ್ರ

ಮಾರಮ್ಮ ದೇವಸ್ಥಾನ ಕಾಮಗಾರಿಗೆ ಭೂಮಿ ಪೂಜೆ

ದೇವಾಲಯಗಳಿಂದ ಮನುಷ್ಯನಿಗೆ ಸುಖ, ಶಾಂತಿ, ನೆಮ್ಮದಿ: ಎಂಎಲ್‌ಸಿ ಡಾ.ಯತೀಂದ್ರ

ತಿ.ನರಸೀಪುರ, ಮೇ 30– ಸನಾತನ ಧರ್ಮ, ಸಂಸ್ಕೃತಿಯ ಪ್ರತೀಕವಾದ ದೇವಾಲಯಗಳು ಮನುಷ್ಯನಿಗೆ ಸುಖ, ಶಾಂತಿ, ನೆಮ್ಮದಿ ಕರುಣಿಸುವ ಶ್ರದ್ಧಾ ಕೇಂದ್ರಗಳಾಗಿವೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ಮಾರಮ್ಮ ದೇವಸ್ಥಾನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಠ ಮಾನ್ಯಗಳು ಹಾಗೂ ದೇವಾಲಯಗಳು ಮನುಷ್ಯನನ್ನು ಸನ್ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ನೀಡುವ ಮೂಲಕ ಆತನ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ ಕರುಣಿಸುವ ಕ್ಷೇತ್ರಗಳಾಗಿವೆ ಎಂದರು.

ಸನಾತನ ಸಂಸ್ಕೃತಿಯ ಮಠಮಾನ್ಯಗಳು ಹಾಗೂ ದೇವಾಲಯಗಳನ್ನು ಉಳಿಸಿ ಬೆಳೆಸುವ ಜೊತೆಗೆ ಸಮಾಜದಲ್ಲಿನ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಧಾರ್ಮಿಕ ಸಮಾರಂಭಗಳು ಸೂಕ್ತ ವೇದಿಕೆ. ಅಲ್ಲದೇ ನಮ್ಮಲ್ಲಿನ ಆತ್ಮಜ್ಞಾನ ಬೆಳೆಸಿಕೊಳ್ಳಲು ಪ್ರೇರಣೆ ನೀಡುತ್ತದೆ ಎಂದರು.

ದೇವರು, ಧರ್ಮ, ತಂದೆ–ತಾಯಿ, ಗುರು ಹಿರಿಯರು ಎನ್ನುವ ಪೂಜ್ಯ ಭಾವನೆಗಳಲ್ಲಿ ಉತ್ತಮ ಸಂಸ್ಕಾರ ಪಡೆದು, ಜೀವನದ ಸಾರ್ಥಕತೆ ಕಾಣುತ್ತಿದ್ದೇವೆ. ಧರ್ಮದ ಆಚರಣೆಯಿಂದಲೇ ಮನುಷ್ಯ ತನ್ನ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ ಕಾಣಲು ಸಾಧ್ಯ ಎನ್ನುವ ಇತಿಹಾಸವನ್ನು ಕಂಡಿರುವ ನಾವು, ದೇವಾಲಯಗಳ ಜೀರ್ಣೋದ್ಧಾರ ಹಾಗೂ ನಿರ್ಮಾಣಕ್ಕೆ ಆದ್ಯತೆ ನೀಡುತ್ತಿದ್ದೇವೆ ಎಂದರು.

ಅಹವಾಲು ಸ್ವೀಕಾರ: ನಂತರ ಸಾರ್ವಜನಿಕರು ರಸ್ತೆ ನಿರ್ಮಾಣ, ವಸತಿ, ಜಮೀನು ಖಾತೆ, ಸಾಲ ಮಂಜೂರು, ದೇವಸ್ಥಾನ ನಿರ್ಮಾಣ ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಅಹವಾಲು ಸಲ್ಲಿಸಿ ಬಗೆಹರಿಸಿ ಕೊಡುವಂತೆ ಮನವಿ ಮಾಡಿದರು.

ಅಹವಾಲು ಸ್ವೀಕರಿಸಿದ ಡಾ.ಯತೀಂದ್ರ, ವರುಣಾ ಕ್ಷೇತ್ರದ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೂಲ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ನೀಡಿ ಅನುದಾನ ಬಿಡುಗಡೆಗೊಳಿಸುತ್ತಿದ್ದಾರೆ. ಹಂತ ಹಂತವಾಗಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಮಾಡುವತ್ತ ಹೆಚ್ಚು ಗಮನ ಹರಿಸಲಾಗುವುದು ಎಂದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಜಿಪಂ ಮಾಜಿ ಸದಸ್ಯ ಕೆ.ಮಹದೇವ, ಕಿರಗಸೂರು ಗ್ರಾಪಂ ಅಧ್ಯಕ್ಷ ನಿಂಗರಾಜು, ಮಾಜಿ ಅಧ್ಯಕ್ಷೆ ಚಂದ್ರಮ್ಮ, ದೇವರಾಜ್, ನಾಗರಾಜು ಮತ್ತಿತರರಿದ್ದರು.


ಮಾರಮ್ಮ ದೇವಸ್ಥಾನ ಕಾಮಗಾರಿಗೆ ಡಾ.ಯತೀಂದ್ರ ಭೂಮಿ ಪೂಜೆ ನೆರವೇರಿಸಿದರು.

> ಗ್ರಾಮಸ್ಥರ ಬೇಡಿಕೆ ಗಮನದಲ್ಲಿಟ್ಟುಕೊಂಡು ಮಾರಮ್ಮ ದೇವಸ್ಥಾನ ನಿರ್ಮಾಣಕ್ಕೆ ಮನವಿ ಸಲ್ಲಿಸಲಾಗಿತ್ತು. ಮನವಿಗೆ ಸ್ಪಂದಿಸಿದ ಯತೀಂದ್ರ ಅವರು ಭೂಮಿ ಪೂಜೆ ನೆರವೇರಿಸಿದ್ದಾರೆ. ದೇವಸ್ಥಾನ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಿಕೊಡುವಂತೆ ಕೋರಲಾಗಿದ್ದು, ಶಾಸಕರು ಅಗತ್ಯ ಅನುದಾನ ಬಿಡುಗಡೆ ಮಾಡಿಕೊಡುವ ಭರವಸೆ ನೀಡಿದ್ದಾರೆ. ಅನುದಾನ ಬಿಡುಗಡೆಗೆ ಸಮ್ಮತಿಸಿದ ಡಾ.ಯತೀಂದ್ರ ಅವರಿಗೆ ಗ್ರಾಮಸ್ಥರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. – **ಪರಶಿವ, ಕಸಬಾ ಪಿಎಸಿಎಸ್ ಮಾಜಿ ನಿರ್ದೇಶಕ.**

ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಿ: ಬಿಇಓ

ನಂಜನಗೂಡು, ಮೇ 30– ಯಾವುದೇ ಖಾಸಗಿ ಶಾಲೆಗಳಿಗೂ ಕಡಿಮೆ ಇಲ್ಲದಂತೆ ಸರ್ಕಾರಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣ ಲಭ್ಯವಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಬೇಕು ಎಂದು ಬಿಇಓ ಮಹೇಶ್ ತಿಳಿಸಿದರು.

ನಗರದ ಹಳ್ಳದಕೇರಿ ಸರ್ಕಾರಿ ಶಾಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಖಾಸಗಿ ಶಾಲೆಗಳಲ್ಲಿ ದುಬಾರಿ ಶುಲ್ಕ ಪಾವತಿಸಿದರೂ ಮಕ್ಕಳಿಗೆ ಯಾವುದೇ ಸವಲತ್ತು ಲಭ್ಯವಿಲ್ಲ. ಆದರೆ ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಪಠ್ಯಪುಸ್ತಕ, ನೋಟ್ ಬುಕ್, ವಿದ್ಯಾರ್ಥಿ ವೇತನ, ಶೂ ಮತ್ತು ಸಾಕ್ಸ್ ಸೇರಿದಂತೆ ಬಿಸಿಯೂಟ ಇನ್ನಿತರ ಸೌಕರ್ಯ ದೊರೆಯಲಿದೆ ಜೊತೆಗೆ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರು ಲಭ್ಯವಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುವ ಮೂಲಕ ಮಕ್ಕಳ ಭವಿಷ್ಯ ಉತ್ತಮಪಡಿಸಬೇಕು ಎಂದರು.

ಮೊದಲ ದಿನ ಶಾಲೆಗೆ ಆಗಮಿಸಿದ ಮಕ್ಕಳಿಗೆ ಸಿಹಿ ವಿತರಿಸಿ ಸ್ವಾಗತಿಸಿದ ಪ್ರಥಮ ದರ್ಜೆ ಗುತ್ತಿಗೆದಾರ ಯು.ಎನ್.ಪದ್ಮನಾಭ ರಾವ್ ಮಾತನಾಡಿ, ಬಾಲ್ಯದಿಂದಲೂ ಮಕ್ಕಳು ರಾಷ್ಟ್ರಪ್ರೇಮ ಬೆಳೆಸಿಕೊಂಡು ದೇಶದ ಉತ್ತಮ ಪ್ರಜೆಗಳಾಗಿ ಹೊರ ಹೊಮ್ಮಬೇಕಿದೆ. ಆದ್ದರಿಂದ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪೋಷಕರ ಕರ್ತವ್ಯವಾಗಿದ್ದು, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಲಭ್ಯವಿರುವುದರಿಂದ ಅದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಬೇಸಿಗೆ ರಜೆ ಕಳೆದು ಮೊದಲ ದಿನ ಶಾಲೆಗೆ ಆಗಮಿಸಿದ ಮಕ್ಕಳನ್ನು ಹಳ್ಳದಕೇರಿ ಸರ್ಕಾರಿ ಶಾಲೆಯಲ್ಲಿ ಗುಲಾಬಿ ಹೂ ನೀಡಿ ಸಿಹಿ ವಿತರಿಸುವ ಮೂಲಕ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್, ಮುಖ್ಯ ಶಿಕ್ಷಕಿ ಗೀತಾ.ಕೆ, ಸಹ ಶಿಕ್ಷಕರಾದ ಸತೀಶ್ ದಳವಾಯಿ, ಮುದ್ದಮಾದೇಗೌಡ, ಅಕ್ಷರ ದಾಸೋಹ ಸಿಬ್ಬಂದಿಗಳಾದ ಸರಸ್ವತಿ, ಗಾಯತ್ರಿ, ಲಕ್ಷ್ಮೀ ಮತ್ತಿತರರಿದ್ದರು.


ಶಾಲಾ ಪ್ರಾರಂಭೋತ್ಸವದಲ್ಲಿ ಗಮನ ಸೆಳೆದ ಗಾರುಡಿ ಗೊಂಬೆ, ಹುಲಿ ವೇಷಧಾರಿಗಳು.

ಶ್ರೀಕಂಠೇಶ್ವರಸ್ವಾಮಿ ಹುಂಡಿಯಲ್ಲಿ 1.5 ಕೋಟಿ ಸಂಗ್ರಹ

ನಂಜನಗೂಡು, ಮೇ 30– ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಹುಂಡಿಯಲ್ಲಿ 1.5 ಕೋಟಿ ರೂ. ಸಂಗ್ರಹವಾಗಿದೆ.

ದೇವಾಲಯದ ದಾಸೋಹ ಭವನದಲ್ಲಿ ಶುಕ್ರವಾರ ನಡೆದ ಹುಂಡಿ ಎಣಿಕೆ ವೇಳೆ 1,50,56,223 ರೂ., 114 ಗ್ರಾಂ ಚಿನ್ನ, 2 ಕೆಜಿ ಬೆಳ್ಳಿ ಹಾಗೂ 53 ವಿದೇಶಿ ಕರೆನ್ಸಿಗಳು ಲಭ್ಯವಾಗಿವೆ. ಎಣಿಕೆ ಕಾರ್ಯದಲ್ಲಿ ಮಹಿಳಾ ಸ್ವಸಹಾಯ ಸಂಘದ ನೂರಕ್ಕೂ ಹೆಚ್ಚು ಮಹಿಳೆಯರು, ಕೆನರಾ ಬ್ಯಾಂಕ್ ಹಾಗೂ ದೇವಾಲಯದ ಸಿಬ್ಬಂದಿ ಭಾಗವಹಿಸಿದ್ದರು.

ಈ ವೇಳೆ ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ಸತೀಶ್, ತಲಕಾಡು ದೇವಾಲಯದ ಇಓ ವೆಂಕಟೇಶ್ ಪ್ರಸಾದ್, ಲೆಕ್ಕಾಧಿಕಾರಿ ಗುರುಮಲ್ಲಯ್ಯ ಉಪಸ್ಥಿತರಿದ್ದರು.



ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 6ರಲ್ಲಿ

‘ಕೈ’ ಬಿಟ್ಟು ತೆನೆ ಹೊತ್ತ ಮುಖಂಡರು


ಮಿಠಾಯಿ ಅಮಾನುಲ್ಲಾ ತಮ್ಮ ಬೆಂಬಲಿಗರೊಂದಿಗೆ ಜೆಡಿಎಸ್ ಸೇರ್ಪಡೆಗೊಂಡರು.

ಹುಣಸೂರು, ಮೇ 30– ಶಾಸಕ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ನಗರದ ಲಾಲ್‌ಬನ್ ಬೀದಿ(20ನೇ ವಾರ್ಡ್) ಕಾಂಗ್ರೆಸ್ ಮುಖಂಡ ಮಿಠಾಯಿ ಅಮಾನುಲ್ಲಾ ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್ ತೊರೆದು ಜೆಡಿಎಸ್ ಪಕ್ಷ ಸೇರ್ಪಡೆಗೊಂಡರು.

ಈ ವೇಳೆ ಶಾಸಕ ಜಿ.ಡಿ.ಹರೀಶ್‌ಗೌಡ ಅವರು ಅಮಾನುಲ್ಲಾ ಹಾಗೂ ಅವರ ಬೆಂಬಲಿಗರಿಗೆ ಪಕ್ಷದ ಶಾಲು ಹೊದಿಸಿ ಬರಮಾಡಿಕೊಂಡರು. ನಗರಸಭೆ ಸದಸ್ಯರಾದ ಕೃಷ್ಣರಾಜಗುಪ್ತ, ಸತೀಶ್ ಕುಮಾರ್, ಮಾಜಿ ಸದಸ್ಯ ಅಯೂಬ್ ಖಾನ್, ಮುಖಂಡರಾದ ಜಖಾವುಲ್ಲಾ, ಸಮಿವುಲ್ಲಾ ಸೇರಿದಂತೆ ನೂರಾರು ಕಾರ್ಯಕರ್ತರು ಹಾಜರಿದ್ದರು.

ಮೂಗೂರಲ್ಲಿ ಶಾಲಾ ಪ್ರಾರಂಭೋತ್ಸವ


ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ವಿತರಿಸುವ ಮೂಲಕ ಶಾಲೆ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಎಂ.ರಂಗಸ್ವಾಮಿ ನೇತೃತ್ವದಲ್ಲಿ ಶಾಲೆ ಪ್ರಾರಂಭಿಸಲಾಯಿತು.

ಉಕ್ಕಲಗೆರೆ ಗ್ರಾಪಂಗೆ ಮಹದೇವ ಅಧ್ಯಕ್ಷ

ತಿ.ನರಸೀಪುರ, ಮೇ 30– ತಾಲೂಕಿನ ಉಕ್ಕಲಗೆರೆ ಗ್ರಾಪಂ ನೂತನ ಅಧ್ಯಕ್ಷರಾಗಿ ಬೂದಹಳ್ಳಿ ಗ್ರಾಮದ ಮಹದೇವ ಅವಿರೋಧವಾಗಿ ಆಯ್ಕೆಯಾದರು.

ನಿಕಟಪೂರ್ವ ಅಧ್ಯಕ್ಷೆ ನಾಗಲಾಂಬಿಕ ಅವರು ರಾಜೀನಾಮೆ ಸಲ್ಲಿಸಿದ ಕಾರಣ ಅವರಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಮಹದೇವ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ಗೋವಿಂದರಾಜು ಪ್ರಕಟಿಸಿದರು.

ಚುನಾವಣಾ ಸಭೆಗೆ ಉಪಾಧ್ಯಕ್ಷೆ ಶಿವಮ್ಮ, ನಿಕಟಪೂರ್ವ ಅಧ್ಯಕ್ಷೆ ನಾಗಲಾಂಬಿಕ, ಸದಸ್ಯೆ ಮಂಜುಳಾ, ಎಂ.ನಿಂಗರಾಜು, ಆರ್.ರವಿ ಶಂಕರ್, ಲತಾ, ಮಹದೇವಮ್ಮ, ಹಾಜರಾಗಿ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ಸೂಚಿಸಿದರೆ, ಸದಸ್ಯರಾದ ಪುಟ್ಟಮ್ಮ, ಶಿವಪ್ರಸಾದ್, ರಾಜಮ್ಮ, ಮಲ್ಲೇಶಪ್ಪ, ಎಂ.ಕುಮಾರ, ಎಸ್.ಸಿದ್ದರಾಜು ಗೈರಾಗಿದ್ದರು.

ಕಾಂಗ್ರೆಸ್ ಮುಖಂಡ ಎಂ.ಎಲ್.ಹುಂಡಿ ಪರಶಿವಮೂರ್ತಿ ಮಾತನಾಡಿ, ಉಕ್ಕಲಗೆರೆ ಗ್ರಾಪಂ ವ್ಯಾಪ್ತಿಯ ಮುಖಂಡರ ಪೈಕಿ ಬಸವಣ್ಣ ಅಗ್ರಗಣ್ಯರು. ಕಳೆದ 30 ವರ್ಷಗಳಿಂದ ಸಾರ್ವಜನಿಕ ಸೇವೆಯಲ್ಲಿದ್ದಾರೆ. ಕಾಂಗ್ರೆಸ್ ಈ ಭಾಗದಲ್ಲಿ ಪ್ರಾಬಲ್ಯ ಹೊಂದಿದ್ದರೆ ಅದಕ್ಕೆ ಬಸವಣ್ಣ ಕಾರಣ. ಏನೂ ಸಾಧನೆ ಮಾಡದ ಅನೇಕರು ಅಧಿಕಾರ ಅನುಭವಿಸುತ್ತಿದ್ದಾರೆ. ಆದರೆ ಪಕ್ಷಕ್ಕಾಗಿ ದುಡಿಯುತ್ತಿರುವ ಇವರಿಗೆ ಯಾವುದೇ ಅಧಿಕಾರ ದೊರಕಿಲ್ಲ. ಇತ್ತೀಚಿಗೆ ಸರ್ಕಾರ ಕೆಡಿಪಿ ಸ್ಥಾನ ನೀಡಿದೆ. ಆದರೆ ಅವರ ದುಡಿಮೆಗೆ ಕೆಡಿಪಿ ಸ್ಥಾನ ತಕ್ಕದ್ದಲ್ಲ. ಆದ್ದರಿಂದ ಅವರಿಗೆ ಉನ್ನತ ಹುದ್ದೆ ನೀಡಬೇಕು. ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಹೋರಾಟ ಮಾಡಲಾಗುತ್ತದೆ ಎಂದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಡಿಸಿಸಿ ಸದಸ್ಯ ಉಕ್ಕಲಗೆರೆ ಬಸವಣ್ಣ ಮಾತನಾಡಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಕಗ್ಗಲೀಪುರ ಎಂ.ರಾಜಣ್ಣ, ಡೈರಿ ಅಧ್ಯಕ್ಷ ಕೊಳತ್ತೂರು ಎನ್.ಕುಮಾರ್, ಗ್ರಾಪಂ ಮಾಜಿ ಸದಸ್ಯ ಎಂ.ರಾಜು, ನಾಗಲಗೆರೆ ಶಾಂತರಾಜು, ಮುಖಂಡರಾದ ನಂಜುಂಡಯ್ಯ, ಎಂ.ಎಲ್.ಹುಂಡಿ ಪರಶಿವಮೂರ್ತಿ, ಪುಟ್ಟಮಾದ, ಶ್ರೀಕಂಠಸ್ವಾಮಿ, ಕಳ್ಳೀಪುರ ನಾಗಣ್ಣ, ಪುಟ್ಟಸ್ವಾಮಿ, ದೇವರಾಜು, ನಟರಾಜಮೂರ್ತಿ, ರಾಘವೇಂದ್ರ, ಬೂದಹಳ್ಳಿ ಮಾಧು, ಮರಿಜೋಗಿ, ಶಿವಣ್ಣ, ಪ್ರಸನ್ನ, ದೊಡ್ಡೇಬಾಗಿಲು ಮಹದೇವಯ್ಯ, ಲಿಂಗರಾಜು, ಸಿದ್ದರಾಮು, ಪರಮೇಶ, ಮಂಜುನಾಥ್, ಅಡಿಗೆ ಕಂಟ್ರಾಕ್ಟರ್ ನಾಗರಾಜು, ಕೆಇಬಿ ಕುಮಾರ್, ಕಳ್ಳಿಪುರ ಮಲ್ಲಪ್ಪ, ರವಿ, ಬಸವರಾಜು, ಪಿಡಿಓ ಕೃಷ್ಣಪ್ಪ, ಕಾರ್ಯದರ್ಶಿ ಮಹೇಶ್, ಬಿಲ್ ಕಲೆಕ್ಟರ್ ಬಸವರಾಜು, ಸಿದ್ದಯ್ಯ, ಕಂಪ್ಯೂಟರ್ ಆಪರೇಟರ್ ಉಮಾ ಸೇರಿದಂತೆ ಮತ್ತಿತರರಿದ್ದರು.


ಉಕ್ಕಲಗೆರೆ ಗ್ರಾಪಂ ಅಧ್ಯಕ್ಷ ಮಹದೇವ ಅವರನ್ನು ಮುಖಂಡರು ಅಭಿನಂದಿಸಿದರು.

ಮಾದರಿ ಸರ್ಕಾರಿ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ


ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ನಡೆಯಿತು.

ಕೆ.ಆರ್.ನಗರ, ಮೇ 30– ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದರೆ ಉನ್ನತ ಶಿಕ್ಷಣ ಪಡೆದು ಉತ್ತಮ ಸ್ಥಾನ ಪಡೆಯಬಹುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನ ಬಳಿಯ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳ ಉಳಿವಿಗೆ ನಮ್ಮೊಂದಿಗೆ ಸಹಕಾರ ನೀಡಬೇಕು ಎಂದರು.

ಮಕ್ಕಳ ಭವಿಷ್ಯ ರೂಪಿಸುವ ಮಹತ್ವದ ಜವಾಬ್ದಾರಿ ಶಿಕ್ಷಕರ ಮೇಲಿದ್ದು, ಅದನ್ನು ಅರಿತು ಜವಾಬ್ದಾರಿಯುತವಾಗಿ ಶಿಕ್ಷಕರು ಕರ್ತವ್ಯ ನಿರ್ವಹಿಸಬೇಕು ಎಂದರು.

ಕಳೆದ ಶೈಕ್ಷಣಿಕ ಸಾಲಿನಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಒಂದು ಕ್ರಮಾಂಕ ಕುಸಿದ್ದಿದ್ದು, ಈ ವಿಚಾರ ಬೇಸರ ತಂದಿದೆ. ಹೀಗಾಗಿ ಇಂದಿನಿಂದಲೇ ಕಾರ್ಯಯೋಜನೆ ರೂಪಿಸಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಉನ್ನತ ಸ್ಥಾನಕ್ಕೇರಲು ಪ್ರಯತ್ನಿಸಿ ಎಂದು ಸಲಹೆ ನೀಡಿದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಹತ್ತು ಹಲವು ಯೋಜನೆಗಳನ್ನು ರೂಪಿಸಿದ್ದು, ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು ಸುಂದರ ಭವಿಷ್ಯ ರೂಪಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಅಕ್ಷರ ದಾಸೋಹದ ಜೊತೆಗೆ ಅನ್ನ ದಾಸೋಹ ಜಾರಿಗೆ ತಂದ ಕೀರ್ತಿ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ. ಇದರ ಜೊತೆಗೆ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಮೊಟ್ಟೆ, ಬಾಳೆಹಣ್ಣು, ಶೂ ಸೇರಿದಂತೆ ಎಲ್ಲಾ ಸವಲತ್ತು ಒದಗಿಸುತ್ತಿದ್ದು ಸರ್ಕಾರದ ಆಶಯದಂತೆ ಕಲಿತು ನಾಡಿಗೆ ಕೀರ್ತಿ ತರಬೇಕೆಂದು ತಿಳಿಸಿದರು.

ತಹಶೀಲ್ದಾರ್ ಜಿ.ಸುರೇಂದ್ರಮೂರ್ತಿ, ಬಿಇಓ ಆರ್.ಕೃಷ್ಣಪ್ಪ, ಬಿಆರ್‌ಸಿ ವೆಂಕಟೇಶ್, ತಾಲೂಕು ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಎನ್.ಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷೆ ಮಹದೇವಿ, ಸದಸ್ಯ ಅಸ್ಲಾಂ, ಚಂದ್ರಶೇಖರ್, ಎನ್.ಶಿವಕುಮಾರ್, ಅರುಣ್.ಬಿ.ನರಗುಂದ್, ಸತ್ಯನಾರಾಯಣ, ಇಸಿಓಗಳಾದ ದಾಸಪ್ಪ, ಪೂರ್ಣಿಮಾ, ಜಗದೀಶ್, ಸಿಆರ್‌ಪಿ ಹೆಚ್.ಎಸ್.ಹರಿಪ್ರಸಾದ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸ್ವಾಮೀಗೌಡ, ಮುಖ್ಯ ಶಿಕ್ಷಕ ನಾಗರಾಜು, ಶಿಕ್ಷಕರಾದ ರವಿ, ರೂಪ ರುಕ್ಮಿಣಿ, ಜ್ಯೋತಿ ಪೆರಾರ, ನೇತ್ರಾವತಿ ಇದ್ದರು.

ವಿದ್ಯಾರ್ಥಿಗಳು ಸರ್ಕಾರದ ಸವಲತ್ತುಗಳನ್ನು ಬಳಸಿಕೊಳ್ಳಿ

ಪಿರಿಯಾಪಟ್ಟಣ, ಮೇ 30– ವಿದ್ಯಾರ್ಥಿಗಳು ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಆಶ್ರಯ ಸಮಿತಿ ಅಧ್ಯಕ್ಷ ನಿತೀನ್ ವೆಂಕಟೇಶ್ ತಿಳಿಸಿದರು.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಪೇಟೆ ಶಾಲೆಯಲ್ಲಿ ಶೈಕ್ಷಣಿಕ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ನೋಟ್‌ಬುಕ್ ವಿತರಿಸಿ, ಸ್ವಾಗತ ಕೋರಿ ಮಾತನಾಡಿದ ಅವರು, ಸರ್ವರಿಗೂ ಶಿಕ್ಷಣ ದೊರೆಯುವಂತೆ ಮಾಡುವುದು ಸರ್ಕಾರದ ಮೂಲ ಉದ್ದೇಶವಾಗಿದೆ. ಈ ಕಾರಣಕ್ಕಾಗಿ ಸರ್ಕಾರವು ಶಿಕ್ಷಣಕ್ಕೆ ಆದ್ಯತೆ ನೀಡಿ ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದೆ. ಶಾಲೆಗಳ ನಿರ್ಮಾಣ ಹಾಗೂ ಮೂಲ ಸೌಲಭ್ಯಗಳ ಪೂರೈಕೆಗೆ ಅನುದಾನ ಮೀಸಲಿಟ್ಟಿದೆ. ಸರ್ಕಾರಿ ಶಾಲೆಗಳು ಇಂದು ಖಾಸಗಿ ಶಾಲೆಗಳಿಗೂ ಮಿಗಿಲಾಗಿ ಸಾಧನೆ ಮಾಡುತ್ತಿದೆ. ಆದ್ದರಿಂದ ಇಂದಿನ ಶೈಕ್ಷಣಿಕ ವರ್ಷ ವಿದ್ಯಾರ್ಥಿಗಳಿಗೆ ಉತ್ತಮವಾಗಿರಲಿ ಎಂದರು.

ಬಿಇಓ ರವಿ ಪ್ರಸನ್ನ ಮಾತನಾಡಿ, ತಾಲೂಕಿನ ಪ್ರತಿ ಶಾಲೆಯಲ್ಲೂ ಉತ್ತಮ ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮಾಡುತ್ತಿದ್ದಾರೆ. ಶಿಕ್ಷಣದಿಂದ ಬೌದ್ಧಿಕತೆ ಬೆಳೆಯುತ್ತದೆ ಮತ್ತು ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಆದ್ದರಿಂದ ಇಂದಿನ ಶೈಕ್ಷಣಿಕ ವರ್ಷದಲ್ಲಿ ಮತ್ತಷ್ಟು ಅಭಿವೃದ್ಧಿಯತ್ತ ನಾವೆಲ್ಲಾ ಸಾಗೋಣ ಎಂದು ಶುಭ ಕೋರಿದರು.

ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಬಾದಾಮಿ ಹಾಲನ್ನು ನೀಡಿ ಸ್ವಾಗತ ಕೋರಿದರು. ಈ ವೇಳೆ ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಲೋಕೇಶ್, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಶಿವರಾಜ್, ಅಕ್ಷರ ದಾಸೋಹ ಅಧಿಕಾರಿ ಪ್ರಶಾಂತ್, ಬಿಆರ್‌ಸಿ ನಟರಾಜ್, ಐಸಿಓ ಸ್ವಾಮಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ್, ಮುಖ್ಯ ಶಿಕ್ಷಕರಾದ ನಿರ್ಮಲ, ನಟರಾಜ್, ಶಿಕ್ಷಕರಾದ ರವಿ, ಅನಿತಾ, ನೇತ್ರಾವತಿ, ಚಂದ್ರು, ವೀಣಾ ಸೇರಿದಂತೆ ಇತರರಿದ್ದರು.


ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು.

ಜನೌಷಧ ಕೇಂದ್ರಗಳನ್ನು ಮುಚ್ಚುವಂತೆ ಸರ್ಕಾರದ ಆದೇಶ ಖಂಡಿಸಿ

ಬಿಜೆಪಿ ಕಾರ್ಯಕರ್ತರಿಂದ ಮೌನ ಪ್ರತಿಭಟನೆ

ತಿ.ನರಸೀಪುರ, ಮೇ 30– ರಾಜ್ಯ ಸರ್ಕಾರ ಸರ್ಕಾರಿ ಆಸ್ಪತ್ರೆ ಆವರಣದಲ್ಲಿರುವ ಜನೌಷಧ ಕೇಂದ್ರಗಳನ್ನು ಮುಚ್ಚುವಂತೆ ಆದೇಶಿಸಿರುವುದನ್ನು ಖಂಡಿಸಿ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಮುಂಭಾಗ ಬಿಜೆಪಿ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿದರು.

ತಿ.ನರಸೀಪುರ ಹಾಗೂ ವರುಣ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಪಟ್ಟಣದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿರುವ ಪ್ರಧಾನ ಮಂತ್ರಿ ಭಾರತೀಯ ಜನೌಷಧ ಕೇಂದ್ರದ ಮುಂದೆ ಜಮಾಯಿಸಿ ಮೌನ ಪ್ರತಿಭಟನೆ ಮಾಡುವ ಮೂಲಕ ಜನೌಷಧ ಕೇಂದ್ರ ಮುಚ್ಚುವಂತೆ ಆದೇಶ ನೀಡಿರುವ ಸರ್ಕಾರದ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಬಿಜೆಪಿ ವಕ್ತಾರ ದಯಾನಂದ ಪಟೇಲ್ ಮಾತನಾಡಿ, ಪ್ರಧಾನಿ ಮೋದಿ ಅವರು ಬಡವರಿಗೆ ಕೈಗೆಟುಕುವ ಬೆಲೆಯಲ್ಲಿ ಔಷಧ ದೊರಕಿಸಿ ಕೊಡಬೇಕೆಂಬ ಉದ್ದೇಶದಿಂದ ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಜನೌಷಧ ಕೇಂದ್ರಗಳನ್ನು ರಾಜ್ಯದ 207 ಕಡೆ ತೆರೆದು ಅನುಕೂಲ ಕಲ್ಪಿಸಿದ್ದರು. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ತನ್ನ ಅನಾ ಗರಿಕತನ ಪ್ರದರ್ಶನ ಮಾಡುವ ಮೂಲಕ ಜನೌಷಧ ಕೇಂದ್ರಗಳನ್ನು ಮುಚ್ಚುವಂತೆ ಆದೇಶಿಸಿದೆ. ಈ ಮೂಲಕ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆರೋಗ್ಯ ಕ್ಷೇತ್ರದಲ್ಲೂ ರಾಜಕೀಯ ಮಾಡಲೊರಟಿದ್ದಾರೆ. ಸಾರ್ವಜನಿಕರಿಗೆ, ಬಡವರಿಗೆ ಕಡಿಮೆ ದರದಲ್ಲಿ ಸಿಗುತ್ತಿದ್ದ ಔಷಧ ಕೇಂದ್ರಗಳನ್ನು ಮುಚ್ಚಲು ಆದೇಶಿಸುವ ಮೂಲಕ ರಾಜ್ಯ ಸರ್ಕಾರ ಮೆಡಿಕಲ್ ಮಾಫಿಯಾದಲ್ಲಿ ತೊಡಗಿದೆ ಎಂದು ಗಂಭೀರ ಆರೋಪ ಮಾಡಿದರು.

ವರುಣ ಕ್ಷೇತ್ರದ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಮಾತನಾಡಿ, ರಾಜ್ಯ ಸರ್ಕಾರ ಮೆಡಿಕಲ್ ಮಾಫಿಯಾ ನಡೆಸುತ್ತಿದೆ. ಲ್ಯಾಂಡ್ ಮಾಫಿಯಾದಂತೆ ಈಗ ಔಷಧ ಮಾಫಿಯಾ ಮಾಡಲು ಮುಂದಾಗಿದೆ. ಪಂಚ ಯೋಜನೆಗಳಿಗೆ ಹಣ ಹೊಂದಿಸಲು ಸಾಧ್ಯವಾಗದೇ, ಹಣ ಕ್ರೋಢೀಕರಿಸಲು ಮೆಡಿಕಲ್ ಮಾಫಿಯಾ ಮಾಡುತ್ತಿದೆ. ರಾಮನಗರವನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂತಲೂ, ಜನೌಷಧ ಕೇಂದ್ರಗಳನ್ನು ಮುಚ್ಚಿ ಮೆಡಿಕಲ್ ಮಾಫಿಯಾ ಮಾಡಲೊರಟಿರುವ ಸಿದ್ದರಾಮಯ್ಯ ಅವರಿಗೆ ನಾಚಿಕೆಯಾಗಬೇಕು. ಕಾಂಗ್ರೆಸ್ ಸರ್ಕಾರ ಬಡವರ, ದಲಿತರ, ಹಿಂದುಳಿದವರ ಪರ ಎಂದು ಹೇಳುತ್ತದೆ. ಆದರೆ ಬಡವರ ಉಪಯೋಗಕ್ಕೆ ತೆರೆದಿರುವ ಔಷಧ ಕೇಂದ್ರಗಳನ್ನು ಮುಚ್ಚಲು ಹೊರಟಿರುವುದು ಖಂಡನೀಯ. ಕೂಡಲೇ ರಾಜ್ಯ ಸರ್ಕಾರ ತನ್ನ ಅವಿವೇಕಿ ನಿರ್ಧಾರ ಕೈಬಿಟ್ಟು ಜನೌಷಧ ಕೇಂದ್ರ ಮುಚ್ಚುವ ಆದೇಶ ಹಿಂಪಡೆಯಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಬಿಜೆಪಿ ಉಗ್ರ ಪ್ರತಿಭಟನೆ ನಡೆಸಲಿದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ತಿ.ನರಸೀಪುರ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನಸ್ವಾಮಿ, ತಾಪಂ ಮಾಜಿ ಸದಸ್ಯ ಬಸವರಾಜು, ವೀರಶೈವ ಮಹಾಸಭಾ ಅಧ್ಯಕ್ಷ ಪ್ರಕಾಶ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿದ್ದರಾಜು, ಟೌನ್ ಅಧ್ಯಕ್ಷ ನಂಜುಂಡಸ್ವಾಮಿ, ಶಿವರಾಜು, ಗ್ರಾಪಂ ಸದಸ್ಯ ಮಹದೇವಸ್ವಾಮಿ, ಪುರಸಭಾ ಮಾಜಿ ಸದಸ್ಯ ಎನ್.ಲೋಕೇಶ್, ರೈತ ಮೋರ್ಚಾ ಅಧ್ಯಕ್ಷ ಸೋಮಶೇಖರಪ್ಪ, ಮೂಗೂರು ಸಿದ್ದರಾಜು, ವಾಟಾಳು ಸುರೇಶ್, ಕರೋಹಟ್ಟಿ ರಾಜಶೇಖರ, ಲಕ್ಷ್ಮಣ್, ತೊಂಟೇಶ್ ಇದ್ದರು.


ಆಸ್ಪತ್ರೆ ಎದುರು ಬಿಜೆಪಿ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದರು.

ಮುಂಬೈ 2ನೇ ಕ್ವಾಲಿಫೈಯರ್

ಐಪಿಎಲ್ ಟೂರ್ನಿಯಿಂದ ಹೊರ ಬಿದ್ದ ಗುಜರಾತ್ ಟೈಟಾನ್ಸ್



ಚಂಡೀಗಢ, ಮೇ 30– ಡು ಆರ್ ಡೈ ಪಂದ್ಯದಲ್ಲಿ ರೋಹಿತ್ ಶರ್ಮಾ ಅವರ ಆಕರ್ಷಕ ಅರ್ಧಶತಕ ಹಾಗೂ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಮುಂಬೈ ಇಂಡಿಯನ್ಸ್, ಗುಜರಾತ್ ಟೈಟಾನ್ಸ್ ವಿರುದ್ಧ 20 ರನ್‌ಗಳ ಜಯ ಗಳಿಸಿದೆ.

ಆ ಮೂಲಕ ಮುಂಬೈ ಜೂ.1 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಅನ್ನು ಎದುರಿಸಲಿದೆ. ಆ ಪಂದ್ಯದಲ್ಲಿ ಗೆಲ್ಲುವ ತಂಡ ಜೂ.3 ರಂದು ನಡೆಯುವ ಫೈನಲ್ ಪಂದ್ಯದಲ್ಲಿ ಟ್ರೋಫಿಗಾಗಿ ಆರ್‌ಸಿಬಿ ಎದುರು ಸೆಣಸಾಡಲಿದೆ. ಮತ್ತೊಂದೆಡೆ ಸೋಲಿನೊಂದಿಗೆ ಶುಭ್‌ಮನ್ ಗಿಲ್ ನೇತೃತ್ವದ ಗುಜರಾತ್ ಟೈಟಾನ್ಸ್ ಟೂರ್ನಿಯಿಂದ ಹೊರ ಬಿದ್ದಿದೆ.

ಚಂಡೀಗಢದ ಮುಲ್ಲನ್‌ಪುರ ಮಹಾರಾಜ ಯಾದವೀಂದ್ರ ಸಿಂಗ್ ಅಂತರ ರಾಷ್ಟ್ರೀಯ ಮೈದಾನದಲ್ಲಿ ಶುಕ್ರವಾರ ನಡೆದ ಎಲಿಮನೇಟರ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 228 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ನಂತರ ಗುರಿ ಬೆನ್ನತ್ತಿದ ಗುಜರಾತ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 208 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು.

ಗುರಿ ಬೆನ್ನಟ್ಟಿದ ಗುಜರಾತ್ ಟೈಟನ್ಸ್‌ಗೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಶುಭ್‌ಮನ್ ಗಿಲ್ ಕೇವಲ 1 ರನ್ ಗಳಿಸಿ ಮೊದಲ ಓವರ್‌ನಲ್ಲೇ ವಿಕೆಟ್ ಒಪ್ಪಿಸಿದರು. 2ನೇ ವಿಕೆಟ್‌ಗೆ ಜೊತೆಯಾದ ಕುಸಾಲ್ ಮೆಂಡಿಸ್ ಹಾಗೂ ಸಾಯಿ ಸುದರ್ಶನ್ 64 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಈ ವೇಳೆ ಕುಸಾಲ್ ಮೆಂಡಿಸ್ 10 ಎಸೆತಗಳಲ್ಲಿ 1 ಬೌಂಡರಿ, 2 ಸಿಕ್ಸರ್ ಒಳಗೊಂಡ 20 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ವಾಷಿಂಗ್ಟನ್ ಸುಂದರ್ ಸಾಯಿ ಸುದರ್ಶನ್ ಜೊತೆಗೂಡಿ 3ನೇ ವಿಕೆಟ್‌ಗೆ 84 ರನ್ ಜೊತೆಯಾಟವಾಡುವ ಮೂಲಕ ಪಂದ್ಯ ಗೆಲುವಿನ ಆಸೆಯನ್ನು ಜೀವಂತವಾಗಿಸಿದ್ದರು. ಆದರೆ ವಾಷಿಂಗ್ಟನ್ ಸುಂದರ್ 24 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ 48 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ಸಾಯಿ ಸುದರ್ಶನ್ 49 ಎಸೆತಗಳಲ್ಲಿ 10 ಬೌಂಡರಿ, 1 ಸಿಕ್ಸರ್ ಒಳಗೊಂಡ 80 ರನ್ ಗಳಿಸಿ ಔಟಾಗಿದ್ದು, ತಂಡದ ಗೆಲುವಿನ ಭರವಸೆ ನುಚ್ಚುನೂರು ಮಾಡಿತು. ಶೆರ್ಫೇನ್ ರುದರ್ಫೋರ್ಡ್ 24, ರಾಹುಲ್ ತೆವಾಟಿಯಾ 16, ಶಾರುಖ್ ಖಾನ್ 13 ತಂಡವನ್ನು ಗೆಲುವಿನ ದಡ ಸೇರಿಸುವಲ್ಲಿ ವಿಫಲರಾದರು. ಟ್ರೆಂಟ್ ಬೌಲ್ಟ್ 2, ಜಸ್ಪ್ರಿತ್ ಬುಮ್ರಾ, ರಿಚರ್ಡ್ ಗ್ಲೀಸನ್, ಮಿಚೆಲ್ ಸ್ಯಾಂಟ್ನರ್, ಅಶ್ವನಿ ಕುಮಾರ್ ತಲಾ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಪರ ರೋಹಿತ್ ಶರ್ಮಾ, ಜಾನಿ ಬೈರ್ ಸ್ಟೋವ್ ಮೊದಲ ವಿಕೆಟ್‌ಗೆ 84 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ನೀಡಿದರು. ಬಿರುಸಿನ ಬ್ಯಾಟಿಂಗ್ ಮಾಡಿದ ಬೈರ್‌ಸ್ಟೋವ್ ಕೇವಲ 22 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 47 ರನ್ ಕಲೆ ಹಾಕಿದರು. ನಂತರ ಬಂದ ಸೂರ್ಯ ಕುಮಾರ್ ಯಾದವ್ 33 ರನ್ ಗಳಿಸಿ ನಿರ್ಗಮಿಸಿದರು. ಈ ನಡುವೆ ದೊರೆತ ಜೀವದಾನಗಳನ್ನು ಸದುಪಯೋಗ ಪಡಿಸಿಕೊಂಡ ರೋಹಿತ್ ಶರ್ಮಾ 50 ಎಸೆತಗಳಲ್ಲಿ 4 ಸಿಕ್ಸರ್, 9 ಬೌಂಡರಿ ಒಳಗೊಂಡ 81 ರನ್ ಗಳಿಸಿ ಔಟಾದರು. ನಂತರ ಬಂದ ತಿಲಕ್ ವರ್ಮಾ 3 ಸಿಕ್ಸರ್ ಒಳಗೊಂಡ 25 ರನ್ ಗಳಿಸಿದರೇ, ನಾಯಕ ಹಾರ್ದಿಕ್ ಪಾಂಡ್ಯ ಕೂಡ 3 ಸಿಕ್ಸರ್ ಒಳಗೊಂಡ 22 ರನ್ ಗಳಿಸಿ ಮುಂಬೈ ಬೃಹತ್ ಮೊತ್ತ ದಾಕಲಿಸಲು ನೆರವಾದರು. ಗುಜರಾತ್ ಪರ ಪ್ರಸಿದ್ಧ್ ಕೃಷ್ಣ, ಸಾಯಿ ಕಿಶೋರ್ ತಲಾ 2 ವಿಕೆಟ್ ಕಿತ್ತರು. ಮೊಹಮ್ಮದ್ ಸಿರಾಜ್ 1 ವಿಕೆಟ್ ಪಡೆದರು. ರೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭೈರವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೆಟ್ರೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಿಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಜಿನ್ನ್ (ತ)	4 ಪ್ರದರ್ಶನಗಳು
ಸಂಗಂ	
ಮಂಡ್ಯ (ಕ)	4 ಪ್ರದರ್ಶನಗಳು
ಲಿಡೋ	
ಠಾಣೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪರಿಶೀಲಿಸಿದ ಇಂಟ್ಯಾಕ್ ತಜ್ಞರ ತಂಡ



ಇಂಟ್ಯಾಕ್ ತಜ್ಞರ ತಂಡ ಶುಕ್ರವಾರ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನ ಸ್ಥಿತಿಯನ್ನು ಪರಿಶೀಲಿಸಿತು

ಮೈಸೂರು, ಮೇ 30(ಆರ್‌ಕೆ)– ಸುಪ್ರೀಂ ಕೋರ್ಟ್ ಸೂಚನೆಯಂತೆ ಇಂಟ್ಯಾಕ್ (Indian National Trust for Art & Cultural Heritage) ತಜ್ಞರ ನಿಯೋಗ ಇಂದು ಮೈಸೂರಿನ ವಿವಾದಾತ್ಮಕ ಲ್ಯಾನ್ಸ್‌ಡೌನ್ ಕಟ್ಟಡವನ್ನು ಪರಿಶೀಲಿಸಿತು.

ನಿವೃತ್ತ ಪ್ರಾಧ್ಯಾಪಕ ಪ್ರೊ. ರಘುನಾಥ ನೇತೃತ್ವದ ಐವರು ಇಂಟ್ಯಾಕ್ ಪ್ರತಿನಿಧಿಗಳು ಶಿಥಿಲಾವಸ್ಥೆಯಲ್ಲಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ಗೆ ಭೇಟಿ ನೀಡಿ ನೆಲ ಮಹಡಿ, ಮೊದಲ ಮಹಡಿ, ಅಡಿಪಾಯ, ಕಟ್ಟಡದ ಬೀಮ್, ಪಿಲ್ಲರ್, ಛಾವಣಿ, ಕಿಟಕಿ–ಬಾಗಿಲು, ಕಟ್ಟಡದ ಸದೃಢತೆ ಪರಿಶೀಲಿಸಿದರು.

ಈ ವೇಳೆ ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆಜೆ ಸಿಂಧೂ, ಎಕ್ಸಿಕ್ಯೂಟಿವ್ ಇಂಜಿನಿಯರ್ ಎ.ಎನ್. ಮಧುಸೂದನ್ ಹಾಗೂ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ವೆಂಕಟೇಶ್ ಉಪಸ್ಥಿತರಿದ್ದು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನಿರ್ಮಾಣ, ನವೀಕರಿಸಿದ ಅವಧಿ, ನಿರ್ವಹಣೆ ಮಾಡುತ್ತಿದ್ದ ವಿಧಾನ, ಅಂಗಡಿ ಮಳಿಗೆಗಳ ಸಂಖ್ಯೆ, ಕಟ್ಟಡದ ಭಾಗ ಉರುಳಿ ಬಿದ್ದಿರುವುದು ಸೇರಿದಂತೆ ಎಲ್ಲ ಮಾಹಿತಿ ನೀಡಿದರು.

ಪ್ರತಿಯೊಂದು ಹಂತದಲ್ಲೂ ಪರಿಶೀಲನೆ ನಡೆಸಿ ಮಾಹಿತಿ ದಾಖಲಿಸಿಕೊಂಡ ತಜ್ಞರು, ಮತ್ತೊಂದು ದಿನ ಬಂದು ದೇವರಾಜ ಮಾರುಕಟ್ಟೆ ಕಟ್ಟಡ ವೀಕ್ಷಿಸುವುದಾಗಿ ಹೇಳಿ ಮಧ್ಯಾಹ್ನ 2.30 ಗಂಟೆಗೆ ಬೆಂಗಳೂರಿಗೆ ಹಿಂತಿರುಗಿದರು. ಎರಡು ಪ್ರತ್ಯೇಕ ಪಾರಂಪರಿಕ ತಜ್ಞರ ಸಮಿತಿ ಸದಸ್ಯರೂ ವ್ಯತಿರಿಕ್ತ ವರದಿ ನೀಡಿ ಶಿಫಾರಸ್ಸು ಮಾಡಿದ್ದಾರೆ. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಪಾರಂ ಪರಿಕ ಕಟ್ಟಡಗಳು ಸಂಪೂರ್ಣ ಶಿಥಿಲಗೊಂಡು ಬಳಸಲು ಯೋಗ್ಯವಲ್ಲದ ಕಾರಣ ಅವುಗಳನ್ನು ಕೆಡವಿ ಅದೇ ಮಾದರಿಯಲ್ಲಿ ಹೊಸ ಕಟ್ಟಡ ನಿರ್ಮಿಸುವುದು ಸೂಕ್ತ ಎಂದು ಸಮಿತಿ ವರದಿ ನೀಡಿದೆ. ಎರಡೂ ಕಟ್ಟಡಗಳು ಗಟ್ಟಿಯಾಗಿದ್ದು, ಸಣ್ಣಪುಟ್ಟ ರಿಪೇರಿ ಮಾಡಿ ಪುನರುಜ್ಜೀವನಗೊಳಿಸುವ ಮೂಲಕ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸ ಬಹುದೆಂದು ಮತ್ತೊಂದು ಸಮಿತಿ ತಜ್ಞರು ಅಭಿಪ್ರಾಯಿಸಿ ವರದಿ ನೀಡಿದ್ದಾರೆ.

ಈ ನಡುವೆ ದೇವರಾಜ ಮಾರುಕಟ್ಟೆ ಬಾಡಿಗೆದಾರರು ಕಟ್ಟಡ ಉಳಿಸಿಕೊಳ್ಳಬೇಕೆಂದು ಹೋರಾಟ ಮಾಡುತ್ತಿದ್ದು, ಅದಕ್ಕಾಗಿ ಸುಪ್ರೀಂಕೋರ್ಟ್‌ನಲ್ಲಿ ಮನವಿ ಸಲ್ಲಿಸಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ ಸರ್ವೋಚ್ಛ ನ್ಯಾಯಾಲಯವು, ಎರಡೂ ತಜ್ಞರ ಸಮಿತಿ ವರದಿಗಳ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪ್ರತ್ಯೇಕವಾಗಿ ಇಂಟ್ಯಾಕ್ ಮತ್ತು ಆರ್ಕ್ಯಾಲಜಿ ಸರ್ವೆ ಆಫ್ ಇಂಡಿಯಾ (ಎಎಸ್‌ಐ) ಸಂಸ್ಥೆಗಳ ತಜ್ಞರಿಂದ ಪರಿಶೀಲಿಸಿ ವರದಿ ನೀಡುವಂತೆ ನಿರ್ದೇಶನ ನೀಡಿದೆ.

ಇಂಟ್ಯಾಕ್ ನಂತರ ಎಎಸ್‌ಐ ತಜ್ಞರೂ, ಭೇಟಿ ನೀಡಿ ಎರಡೂ ಕಟ್ಟಡಗಳ ಕುರಿತು ವರದಿ ಸಲ್ಲಿಸಿದ ಬಳಿಕವೇ ಸುಪ್ರೀಂಕೋರ್ಟ್ ಅಂತಿಮ ತೀರ್ಪು ನೀಡಲಿದೆ.

ಈ ನಡುವೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಪುನರ್ ನಿರ್ಮಾಣ ಸಂಬಂಧ ರಾಜ್ಯ ಸರ್ಕಾರವು ಕಳೆದ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದು, ಅನುದಾನವನ್ನೂ ಮೀಸಲಿರಿಸಿದೆಯಾದರೂ ಈವರೆಗೆ ಯಾವುದೇ ಪ್ರಕ್ರಿಯೆ ನಡೆದಿಲ್ಲ.

ಐಪಿಎಲ್ ಟಿಕೆಟ್ ಕಾಳಸಂತೆಯಲ್ಲಿ ಮಾರಾಟ: ದಂಧೆ ಕಿಂಗ್‌ಪಿನ್ ಆಗಿದ್ದ ಇಬ್ಬರು ಪೊಲೀಸರು ಸಸ್ಪೆಂಡ್





ಬೆಂಗಳೂರು, ಮೇ 30– ಬೆಂಗಳೂರಿನಲ್ಲಿ ಐಪಿಎಲ್ ಟಿಕೆಟ್‌ಗಳ ಕಾಳಸಂತೆಯಲ್ಲಿ ಮಾರಾಟ ಮಾಡುವಾಗ ಇಬ್ಬರು ಕಾನ್ಸ್‌ಟೇಬಲ್‌ಗಳು ಸಿಕ್ಕಿಬಿದ್ದಿದ್ದು, ಈ ಸಂಬಂಧ ಗೋವಿಂದರಾಜನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದೀಗ ಹಲಸೂರು ಸಂಚಾರಿ ಠಾಣೆ ಪೊಲೀಸ್ ಕಾನ್ಸ್‌ಟೇ ಬಲ್ ರವಿಚಂದ್ರ ಹಾಗೂ ಟಿಎಂಸಿ ಸಿಬ್ಬಂದಿ ವೆಂಕಟಗಿರಿಗೌಡ ನನ್ನು ಸಸ್ಪೆಂಡ್ ಮಾಡಿ ಬೆಂಗಳೂರು ಸಂಚಾರ ವಿಭಾಗದ ಜಂಟಿ ಆಯುಕ್ತ ಅನುಚೇತ್ ಆದೇಶ ಹೊರಡಿಸಿದ್ದಾರೆ.

ಮೇ 17ರಂದು ಆರ್‌ಸಿಬಿ ಮತ್ತು ಕೆಕೆಆರ್ ನಡುವೆ ಪಂದ್ಯ ಇತ್ತು. ಅಂದು ವಿಜಯನಗರದ ನಚಿಕೇತ ಪಾರ್ಕ್ ಬಳಿ ಐಪಿಎಲ್ ಟಿಕೆಟ್ ಮಾರಾಟ ಮಾಡುವಾಗ ರವಿಚಂದ್ರ ಹಾಗೂ ವೆಂಕಟಗಿರಿಗೌಡ ಇತರರೊಂದಿಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದಿದ್ದಾರೆ. ಬಂಧಿತರಿಂದ 20 ಸಾವಿರ ನಗದು, 61 ಐಪಿಎಲ್ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಮೇ 17 ರಂದು ಚಿನ್ನಸ್ವಾಮಿ ಸ್ಟೇಡಿಯಂ ನಲ್ಲಿನ ಆರ್ ಸಿಬಿ ಹಾಗೂ ಕೆ.ಕೆ.ಆರ್. ಪಂದ್ಯ ಇತ್ತು. ಈ ಮ್ಯಾಚ್ ಟಿಕೆಟ್‌ಗಾಗಿ ಭಾರೀ ಬೇಡಿಕೆ ಇತ್ತು ಇದನ್ನೇ ಬಂಡವಾಳ ಮಾಡಿಕೊಂಡ ಖದೀಮ ಪೊಲೀಸರು 61 ಟಿಕೆಟ್ ಕಾಳಸಂತೆಯಲ್ಲಿ ಮಾರಾಟ ಮಾಡಲು ಬಂದಾಗ ಸಿಕ್ಕಿ ಬಿದ್ದಿದ್ದಾರೆ. ಕಡಿಮೆ ಹಣದ ಟಿಕೆಟ್ ಅನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಿ ಹಣ ಸಂಪಾದನೆಗೆ ಮುಂದಾಗಿದ್ದರು. ಆದ್ರೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದು ಕೆಲಸದಿಂದಲೇ ಅಮಾನತುಗೊಂಡಿದ್ದಾರೆ.

ಶಿರಾಡಿಘಾಟ್‌ನಲ್ಲಿ ಮತ್ತೆ ಭೂಕುಸಿತ

ಹಾಸನ, ಮೇ 30– ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆ ಆರಂಭವಾಗಿದ್ದು, ಶಿರಾಡಿಘಾಟ್ ರಸ್ತೆ 75ರಲ್ಲಿ ಮತ್ತೆ ಭೂಕುಸಿತ ಉಂಟಾಗಿದೆ. ಸಕಲೇಶಪುರ



ತಾಲೂಕಿನ ಮಾರನಹಳ್ಳಿ ಸಮೀಪ ಭೂ ಕುಸಿತದ ಪರಿಣಾಮ ರಸ್ತೆ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಭಾರೀ ಪ್ರಮಾಣದಲ್ಲಿ ಭೂಕುಸಿತ ಉಂಟಾಗುತ್ತಿದ್ದು, ಅಧಿಕಾರಿಗಳು ಇಟಾಚಿ, ಲಾರಿ ಮೂಲಕ ಮಣ್ಣು ತೆರವು ಕಾರ್ಯ ಮಾಡಿದ್ದಾರೆ. ಮಣ್ಣು ಕುಸಿದ ಕೂಡಲೇ ಇಟಾಚಿ ಮೂಲಕ ಮಣ್ಣು ತೆರವು ಕಾರ್ಯಕ್ಕೆ ಅಧಿಕಾರಿಗಳು ವ್ಯವಸ್ಥೆ ಮಾಡಿದ್ದು, ನಿರಂತರ ಸುರಿಯುತ್ತಿರುವ ಮಳೆಗೆ ಹೆಚ್ಚಿನ ಪ್ರಮಾಣದಲ್ಲಿ ಭೂಮಿ ಕುಸಿಯುವ ಆತಂಕ ಎದುರಾಗಿದೆ.

ಕಮಲ್ ಹಾಸನ್ ಚಿತ್ರ ಬಿಡುಗಡೆಗೆ ಅವಕಾಶ ನೀಡದಂತೆ ಆಗ್ರಹಿಸಿ ಕರವೇ ಪ್ರತಿಭಟನೆ



ನಟ ಕಮಲ್ ಹಾಸನ್ ಅಭಿಯನದ ಥಗ್ ಲೈಫ್ ಸಿನಿಮಾ ಕರ್ನಾಟಕದಲ್ಲಿ ಬಿಡುಗಡೆಗೆ ಅವಕಾಶ ನೀಡದಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಮಹಾತ್ಮಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 30(ಎಂಟಿವೈ)– ಕನ್ನಡ ಭಾಷೆಯ ವಿರುದ್ಧ ಹೇಳಿಕೆ ನೀಡಿರುವ ನಟ ಕಮಲ್ ಹಾಸನ್ ಅಭಿಯನದ ಥಗ್ ಲೈಫ್ ಸಿನಿಮಾ ಕರ್ನಾಟಕದಲ್ಲಿ ಬಿಡುಗಡೆಗೆ ಅವಕಾಶ ನೀಡದಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಶುಕ್ರವಾರ ಬೆಳಗ್ಗೆ ನಾರಾಯಣ ಗೌಡ ಬಣದ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ನಟ ಕಮಲ್ ಹಾಸನ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುವಂತೆ ತಮಿಳು ಭಾಷೆಯಿಂದ ಕನ್ನಡ ಭಾಷೆಯ ಉಗಮವಾಯಿತು ಎಂಬ ತಪ್ಪು ಮತ್ತು ದುರುದ್ದೇಶಪೂರಿತ ಹೇಳಿಕೆಯನ್ನು ಕಮಲ್ ಹಾಸನ್ ನೀಡಿದ್ದಾರೆ. ಈ ಸುಳ್ಳು ಮತ್ತು ಆಧಾರ ರಹಿತ ಹೇಳಿಕೆಯು ಕನ್ನಡ ಭಾಷೆಯ ಶ್ರೀಮಂತ ಇತಿಹಾಸ, ಸಂಸ್ಕೃತಿ ಮತ್ತು ಸ್ವಾಭಿಮಾನಕ್ಕೆ ಅಘಾತವನ್ನುಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ನಟ ಕಮಲ್ ಹಾಸನ್ ಕನ್ನಡಿಗರ ಕ್ಷಮೆ ಕೇಳುವವರೆಗೂ ಅವರು ಅಭಿನಯಿಸಿರುವ ಯಾವುದೇ ಚಲನಚಿತ್ರಗಳನ್ನು ಕರ್ನಾಟಕದಲ್ಲಿ ಪ್ರದರ್ಶಿಸಬಾರದು ಎಂದು ಆಗ್ರಹಿಸಿದರು.

ಜೂ. 5ರಂದು ಬಿಡುಗಡೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವ ಕಮಲ್ ಹಾಸನ್ ಅಭಿನಯದ ಥಗ್ ಲೈಫ್ ಚಿತ್ರ ಕರ್ನಾಟಕದಲ್ಲಿ ಯಾವುದೇ ಕಾರಣಕ್ಕೂ ಬಿಡುಗಡೆ ಮಾಡಬಾರದು. ಒಂದು ವೇಳೆ ರಾಜ್ಯದಲ್ಲಿ ಬಿಡುಗಡೆ ಮಾಡಲು ಮುಂದಾದರೆ, ಅದನ್ನು ಕರವೇ ಕಾರ್ಯಕರ್ತರು ತಡೆಯಲಿದ್ದಾರೆ. ರಕ್ಷಣಾ ವೇದಿಕೆ ರಾಜ್ಯದ ಹಿತ ಕಾಯುವ ನಿಟ್ಟಿನಲ್ಲಿ ಹೋರಾಟ ಮುಂದುವರೆಸಲಿದೆ. ಸಂಪದ್ಭರಿತ ಕನ್ನಡ ಭಾಷೆ ವಿರುದ್ಧ ಯಾರೇ ಮಾತನಾಡಿದರೂ ನಾವು ಸಹಿಸುವುದಿಲ್ಲ. ಕನ್ನಡಿಗರ ಭಾವನೆಗೆ ಧಕ್ಕೆಯುಂಟು ಮಾಡಿರುವ ಕಮಲ್ ಹಾಸನ್ ಕನ್ನಡಿಗರ ಮುಂದೆ ಕ್ಷಮೆಯಾಚಿಸುವವರೆಗೂ ಕರ್ನಾಟಕದಲ್ಲಿ ಅವರ ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ. ಈ ಚಿತ್ರದ ವಿತರಕರು ತಮ್ಮ ಹೂಡಿಕೆಯನ್ನು ರಕ್ಷಿಸಿಕೊಳ್ಳಲು ಅಗತ್ಯ ಮಾರ್ಗ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್, ಲೋಕೇಶ್, ಸುಜಾತಾ, ಸುನಂದ ಪ್ರಸಾದ್, ರಘು, ಅಸ್ಲಾಂ, ಬಾಲು, ಗಜ, ಮದ್ವೇಶ್, ಶಿವರಾಜ್, ಹೇಮಂತ್‌ಗೌಡ, ಲಾಲು, ದೇಪುರು ವಿಜಯ್, ಮಹೇಶ್, ಮಂಜುನಾಥ್, ಸತೀಶ್, ಬಾಲರಾಜ್, ಸಂಪತ್ತು, ಸೈಯದ್, ನವೀನ್, ರಾಜೇಂದ್ರ, ಚಂದ್ರಶೇಖರ್, ಪ್ರದೀಪ್, ಮಹದೇವ ಸ್ವಾಮಿ, ಗುಬ್ಬಿ ಮಹೇಶ್, ರಾಜು, ಶಿವರಾಜು ಇನ್ನಿತರರು ಪಾಲ್ಗೊಂಡಿದ್ದರು.

ಕಮಲ್ ಹಾಸನ್ ಕ್ಷಮೆ ಯಾಚಿಸುವಂತೆ ಆಗ್ರಹಿಸಿ ಕನ್ನಡ ವೇದಿಕೆ ಪ್ರತಿಭಟನೆ



ನಟ ಕಮಲ್ ಹಾಸನ್ ಕ್ಷಮೆಯಾಚನೆಗೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 30(ಎಂಟಿವೈ)– ಕನ್ನಡ ಭಾಷೆಯ ಉಗಮದ ಬಗ್ಗೆ ಹಗುರವಾಗಿ ಮಾತನಾಡಿರುವ ನಟ ಕಮಲ್ ಹಾಸನ್ ಕ್ಷಮೆ ಯಾಚಿಸುವಂತೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದ ಮೈಸೂರು ಕನ್ನಡ ವೇದಿಕೆಯ ಕಾರ್ಯಕರ್ತರು ನಟ ಕಮಲ್ ಹಾಸನ್ ವಿರುದ್ಧ ಘೋಷಣೆ ಕೂಗಿ ಅಸಮಾಧಾನ ವ್ಯಕ್ತಪಡಿಸಿದರು. ಎರಡು ಸಾವಿರ ವರ್ಷ ಇತಿಹಾಸ ವಿರುವ, ಹಲ್ಮಿಡಿ ಶಾಸನದಿಂದ ಹುಟ್ಟಿಕೊಂಡು ಬಂದಿರುವ ನಮ್ಮ ಭಾಷೆ ಸಂಸ್ಕೃತ ಪದಕ್ಕೆ ಕನ್ನಡ ಭಾಷೆಯ ಜೋಡಣೆ ಇದೆ. ಪಂಪನಿಂದ ಹಿಡಿದು ಇಂದಿನವರೆಗೂ ಭಾಷೆಯ ಇತಿಹಾಸ ಸಾಗುತ್ತಿದೆ ಕನ್ನಡಿಗರ ಹೋರಾಟದ ಫಲವಾಗಿ ನಮ್ಮ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ. ಇಮ್ಮಡಿ ಪುಲಿಕೇಶಿ ಕನ್ನಡ ನಾಡಿನಿಂದ ಆಫ್ಘಾನಿಸ್ತಾನದವರೆಗೆ ಆಡಳಿತ ಮಾಡಿದನು. ಮಯೂರ, ಚಂದ್ರಗುಪ್ತ ಇವರ ಕೊಡುಗೆ ನಮ್ಮ ನಾಡಿಗೆ ಅಪಾರವಾದದ್ದು. ಕರ್ನಾಟಕದ ಇತಿಹಾಸದ ಬಗ್ಗೆ ಕಮಲ್ ಹಾಸನ್ ಏನು ಗೊತ್ತಿದೆ ಎಂದು ಪ್ರತಿಭಟನಾಕಾರರು ಪ್ರಶ್ನಿಸಿದರು.

ಚಲನಚಿತ್ರ ಮಂಡಳಿ ಕಮಲ್‌ಹಾಸನ್ ಚಿತ್ರ ಬಿಡುಗಡೆಗೆ ಅವಕಾಶ ಮಾಡಿಕೊಡಬಾರದು. ರಾಜ್ಯದ ಮುಖ್ಯಮಂತ್ರಿಗಳು ಸಹ ಕಟ್ಟುನಿಟ್ಟಾದ ನಿರ್ಧಾರ ತೆಗೆದುಕೊಳ್ಳಬೇಕು. ಆತನ ಚಿತ್ರ ಬಿಡುಗಡೆ ಆಗಬೇಕಾದರೆ ಕರ್ನಾಟಕಕ್ಕೆ ಬಂದು ತನ್ನ ತಪ್ಪನ್ನು ಅರ್ಥ ಮಾಡಿಕೊಂಡು ಕ್ಷಮೆ ಯಾಚಿಸಬೇಕು. ನಮ್ಮಲ್ಲಿರುವ ಸಾಹಿತಿಗಳ ಜೊತೆ ಸಂಪರ್ಕ ಬೆಳೆಸಿ ನಾಡಿನ ಇತಿಹಾಸ ಇರುವ ಪುಸ್ತಕವನ್ನು ತೆಗೆದುಕೊಂಡು ಓದಿ ನಮ್ಮ ಇತಿಹಾಸ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲಿ. ಆತ ಕ್ಷಮೆ ಕೇಳುವವರೆಗೂ ಹೋರಾಟ ನಿಲ್ಲದು ಎಂದು ಪ್ರತಿಭಟನಾಕಾರರು ಘೋಷಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ಗೋಪಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಸಿದ್ದಪ್ಪ ಎಲ್‌ಐಸಿ, ಬೀಡ ಬಾಬು, ಮಹದೇವಸ್ವಾಮಿ, ಮನೋಹರ್, ಗೋವಿಂದರಾಜು, ಹರೀಶ, ಸ್ವಾಮಿ ಹೊನಕೆರೆ, ನಾಗರಾಜು, ಪ್ರೇಮ, ಮಿಲಿಟರಿ ರಾಜು, ಮಾದಪ್ಪ, ಶಿವು, ಸುನೀಲ್ ಇನ್ನಿತರರು ಪಾಲ್ಗೊಂಡಿದ್ದರು.

ಕೆ.ಆರ್.ಆಸ್ಪತ್ರೆಯಲ್ಲಿ ಜನೌಷಧಿ ಕೇಂದ್ರ ಪುನರಾರಂಭಕ್ಕೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ



ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಜನೌಷಧಿ ಕೇಂದ್ರ ಪುನರಾರಂಭಿಸುವಂತೆ ಒತ್ತಾಯಿಸಿ, ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


ಮೈಸೂರು, ಮೇ 30(ಎಂಟಿವೈ)– ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಜನೌಷಧಿ ಕೇಂದ್ರ ಮುಚ್ಚಿರುವ ಕ್ರಮ ಖಂಡಿಸಿ, ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೇಂದ್ರ ಸರ್ಕಾರ ಆರಂಭಿಸಿದ್ದ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರವನ್ನು ಖಾಸಗಿ ಮೆಡಿಕಲ್ ಮಾಫಿಯಾಗೆ ಒಳಗಾಗಿ ಬಂದ್ ಮಾಡಿಸಲಾಗಿದೆ. ಜನೌಷದ ಕೇಂದ್ರದಲ್ಲಿ ಕಡಿಮೆ ದರದಲ್ಲಿ ರೋಗಿಗಳಿಗೆ ಬೇಕಾದ ಎಲ್ಲಾ ಔಷಧ ದೊರೆಯುತ್ತಿತ್ತು. ಇದರಿಂದ ಬಡ ರೋಗಿಗಳಿಗೆ ನೆರವಾಗುತ್ತಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಉದ್ದೇಶಪೂರ್ವಕವಾಗಿ ಜನೌಷದ ಕೇಂದ್ರವನ್ನು ಮುಚ್ಚಿಸಿದೆ ಎಂದು ಕಿಡಿಕಾರಿದರು.

ದೇಶದಾದ್ಯಂತ ರೋಗಿಗಳಿಗೆ ಬೇಕಾದ ಔಷಧಿಯನ್ನು ಕಡಿಮೆ ಬೆಲೆಯಲ್ಲಿ ವಿತರಿಸುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲಾ ಕಡೆ ಜನೌಷಧಿ ಕೇಂದ್ರವನ್ನು ಸ್ಥಾಪಿಸಿದ್ದಾರೆ. ರಾಜ್ಯದಲ್ಲಿ ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜನೌಷಧಿ ಕೇಂದ್ರ ತೆರೆಯಲಾಗಿತ್ತು. ಕಳೆದ ಐದಾರು ವರ್ಷದಿಂದ ಸಾವಿರಾರು ಮಂದಿ ಜನೌಷಧಿ ಕೇಂದ್ರಗಳಲ್ಲಿ ಕಡಿಮೆ ದರದ ಔಷಧಿಯನ್ನು ಖರೀದಿಸಿದ್ದಾರೆ. ಅದರಲ್ಲೂ ಮೈಸೂರಿನ ದೊಡ್ಡಾಸ್ಪತ್ರೆಯೆಂದೇ ಕರೆಯುವ ಕೆ.ಆರ್. ಆಸ್ಪತ್ರೆಗೆ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಿಂದ ಬಡ ಕುಟುಂಬದ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳಲು ಬರುತ್ತಾರೆ. ಖಾಸಗಿ ಮೆಡಿಕಲ್ ಶಾಪ್‌ಗಳಲ್ಲಿ ದುಬಾರಿ ಬೆಲೆ ನೀಡಿ ಔಷಧಿ ಖರೀದಿಸಲು ಕಷ್ಟಕರವಾಗಿತ್ತು. ಈ ಹಿನ್ನೆಲೆಯಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಜನೌಷಧಿ ಕೇಂದ್ರ ಆರಂಭಿಸಿತ್ತು ಎಂದು ಪ್ರತಿಭಟನಾಕಾರರು ತಿಳಿಸಿದರು.

ಕೂಡಲೇ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಮುಚ್ಚಿರುವ ಜನೌಷಧಿ ಕೇಂದ್ರವನ್ನು ಪುನರಾರಂಭಿಸಬೇಕು. ಖಾಸಗಿ ಮೆಡಿಕಲ್ ಮಾಫಿಯಾಗಳ ಒತ್ತಡಕ್ಕೆ ಮಣಿಯಬಾರದು. ಆಸ್ಪತ್ರೆಗೆ ಬರುವ ರೋಗಿಗಳ ಹಿತ ಕಾಯುವ ನಿಟ್ಟಿನಲ್ಲಿ ಹಾಗೂ ಕಡಿಮೆ ಬೆಲೆಯಲ್ಲಿ ಅಗತ್ಯ ಔಷಧಿ ಪೂರೈಸುವುದಕ್ಕಾಗಿ ಜನೌಷಧಿ ಕೇಂದ್ರವನ್ನು ಪುನರಾರಂಭಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ ಮುಖಂಡರಾದ ಬಿ.ಪಿ.ಮಂಜುನಾಥ್, ಹೆಚ್.ಜಿ.ಗಿರಿಧರ್, ಡಾ.ಅನಿಲ್ ಥಾಮಸ್, ಪರಮೇಶ್‌ಗೌಡ, ರಘು, ಗೋಕುಲ್ ಗೋವರ್ಧನ್, ಕಿರಣ್‌ಗೌಡ, ಪುನೀತ್, ರೇಣುಕಾರಾಜ್, ರೂಪ, ಕಾವೇರಿ, ನೇಹಾ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.


HAPPY BIRTHDAY
S. Basavaraju
BEST WISHES FROM
Narendra Babu (B.G. Gowdru)